# ತತ್ತ್ವಸಂಖ್ಯಾನ - ತತ್ತ್ವವಿವೇಕ

ಶ್ರೀ ಶ್ರೀ ವಿಶ್ವೇಶತೀರ್ಥ ಶ್ರೀಪಾದರು
ಶ್ರೀ ಪೇಜಾವರ ಅಧೋಕ್ಷಜಮಠ, ಉಡುಪಿ

ಈ ಎರಡು ಗ್ರಂಥಗಳಲ್ಲಿ ತತ್ತ್ವಗಳ ವಿವೇಚನೆಯಿದೆ. ''ಅನಾರೋಪಿತಂ ತತ್ತ್ವಮ್'' ಕಾಲ್ಪನಿಕವಲ್ಲದ ವಾಸ್ತವ ವಸ್ತುವೇ ತತ್ತ್ವ. ಕಣ್ಣಿಗೆ ಕಾಣುವ ಜಡಪ್ರಪಂಚವು ಮಾತ್ರ ಸತ್ಯ. ಅದರ ಹೊರತು ಬೇರೆ ಸತ್ಯವೇ ಇಲ್ಲವೆಂದು ಕೆಲವರು ಹೇಳಿದರೆ ಕಣ್ಣಿಗೆ ಗೋಚರವಾದ ಈ ಪ್ರಪಂಚವು ಬರೇ ಕಲ್ಪನೆ. ಇದರ ಆಚೆಗಿರುವ ಚೈತನ್ಯ ತತ್ತ್ವ ಮಾತ್ರ ಸತ್ಯವೆಂದು ಕೆಲವರು ವಾದಿಸುತ್ತಾರೆ. ಆದರೆ ಈ ದೃಶ್ಯ ಪ್ರಪಂಚ ಇದನ್ನು ಕಾಣುತ್ತಿರುವ ನಾವು ನಮ್ಮನ್ನೆಲ್ಲಾ ಮೀರಿ ನಿಂತಿರುವ ಮಹಾಚೈತನ್ಯ ಈ ಮೂರೂ ಸತ್ಯವೆಂದು ಶ್ರೀಮದಾಚಾರ್ಯರು ಪ್ರತಿಪಾದಿಸಿದ್ದಾರೆ. ಪರಮಾತ್ಮನು ಪರಸತ್ಯನಾಗಿದ್ದರೆ ಈ ಭಾವ, ಅಭಾವ ಸ್ವರೂಪವಾದ ಈ ಜಡ ಚೇತನಾತ್ಮಕವಾದ ವಿಶ್ವವು ಅಪರಸತ್ಯವಾಗಿದೆ. ಭಗವಂತನ ಸ್ವತಂತ್ರ ತತ್ತ್ವವಾಗಿದ್ದರೆ ಉಳಿದ ವಸ್ತುಗಳು ಅವನ ಅಧೀನ ತತ್ತ್ವವಾಗಿವೆ. ಅಂತೂ ಇವೆಲ್ಲವೂ ಸತ್ಯ ಎಂಬ ವಾಸ್ತವಾಂಶವನ್ನು ಮಾತ್ರ ನಾವು ಮರೆಯಬಾರದು.

ಈ ಪದಾರ್ಥಗಳನ್ನು ನಿರೂಪಿಸುವ ಮತ್ತು ವಿಂಗಡಿಸುವ ರೀತಿಯಲ್ಲಿ ಆಚಾರ್ಯರು ವಿಶಿಷ್ಟಕ್ರಮವನ್ನು ಅನುಸರಿಸಿದ್ದಾರೆ. ತಾರ್ಕಿಕರು ಪದಾರ್ಥಗಳನ್ನು ನಿರೂಪಿಸುವಾಗ ದ್ರವ್ಯ, ಗುಣ ಮುಂತಾದ ಏಳು ವರ್ಗವಾಗಿ ಪದಾರ್ಥಗಳನ್ನು ವಿಂಗಡಿಸಿ ಅದರಲ್ಲಿ ದ್ರವ್ಯಗಳನ್ನು ಭೂಮಿ, ನೀರು ಮುಂತಾಗಿ ಒಂಭತ್ತು ವಿಧವಾಗಿ ವಿಭಜಿಸುತ್ತಾರೆ. ಆ ದ್ರವ್ಯದ ಒಂಭತ್ತು ಪ್ರಕಾರಗಳಲ್ಲಿ ಆತ್ಮರೂ ಒಂದು ಪ್ರಕಾರ. ಈ ಆತ್ಮರಲ್ಲಿ ಪರಮಾತ್ಮನೂ ಒಬ್ಬನು ಎಂಬುದಾಗಿ ಪದಾರ್ಥಗಳನ್ನು ನಿರೂಪಿಸುವಾಗ ಪರಮಾತ್ಮನಿಗೆ ವಿಶಿಷ್ಟಸ್ಥಾನವನ್ನು ನೀಡಿಲ್ಲ. ಆದರೆ ಶ್ರೀಮಧ್ವಾಚಾರ್ಯರು ಸ್ವತಂತ್ರತತ್ತ್ವ ಮತ್ತು ಅಸ್ವತಂತ್ರತತ್ತ್ವ ಅವನೇ ಪರತತ್ತ್ವವೆಂದು ಪದಾರ್ಥ ನಿರೂಪಣೆಯಲ್ಲಿ ಪರಮಾತ್ಮನಿಗೆ ಅತಿ ಮುಖ್ಯಸ್ಥಾನವನ್ನು ನೀಡಿದ್ದಾರೆ. ಅಸ್ವತಂತ್ರ ತತ್ತ್ವಗಳನ್ನು ಭಾವ ವಸ್ತುಗಳೆಂದೂ ಅಭಾವ ವಸ್ತುಗಳೆಂದೂ ವಿಭಾಗಮಾಡಿ ಜೀವ, ಜಡ, ನಿತ್ಯ, ಅನಿತ್ಯ ಎಂದು ಮುಂತಾಗಿ ಅವುಗಳ ವೈವಿಧ್ಯವನ್ನು ನಮಗೆ ತಿಳಿಸಿ ಕೊಟ್ಟಿದ್ದಾರೆ. ಹೀಗೆ ವರ್ಗೀಕರಣದಲ್ಲಿಯೂ ಒಂದು ವಿಶಿಷ್ಟ ರೀತಿಯನ್ನು ಅನುಸರಿಸಿ ಈ ವಿಶ್ವದಲ್ಲಿ ಪರಮಾತ್ಮನ ಅತ್ಯುಚ್ಚಸ್ಥಾನವನ್ನು ನಮಗೆ ಎತ್ತಿ ತೋರಿಸಿದ್ದಾರೆ.

ನಿತ್ಯ ಅನಿತ್ಯಗಳನ್ನು ವಿಶ್ಲೇಷಿಸುವಾಗಲೂ ಅತ್ಯಂತ ಸೂಕ್ಷ್ಮದೃಷ್ಟಿ ಮತ್ತು ವೈಜ್ಞಾನಿಕತೆಯನ್ನು ಆಚಾರ್ಯರು ತೋರಿಸಿದ್ದಾರೆ. ಜೀವರು ಮೂಲಭೂತವಾಗಿ ನಿತ್ಯರೇ ಆಗಿದ್ದರೂ ದೇಹದ ಸಂಪರ್ಕ ಮತ್ತು ವಿನಾಶಗಳಿಂದ ಒಂದು ತೆರನಾದ ಅನಿತ್ಯತೆಯೂ ಜೀವರಿಗೆ ಇದೆ. ಅದರಂತೆ ಪಂಚಭೂತಗಳು ಸೂಕ್ಷ್ಮರೂಪವಾಗಿ ನಿತ್ಯವಾಗಿದ್ದರೂ ಇತರ ತತ್ತ್ವಗಳ ಮಿಶ್ರಣದಿಂದ ಸ್ಥೂಲತೆಯನ್ನು ಪಡೆಯುವುದರಿಂದ ಅನಿತ್ಯವೂ ಎನಿಸಿವೆ. ಆದರೆ ಪರಮಾತ್ಮನು ಇಂತಹ ಯಾವುದೇ ವಿಕೃತಿಗೆ ಒಳಗಾಗದೆ ಇರುವುದರಿಂದ ಅವನೊಬ್ಬನೇ ಪೂರ್ಣ ನಿತ್ಯನಾಗಿ 'ನಿತ್ಯೋ ನಿತ್ಯಾನಾಂ' ಎನಿಸಿದ್ದಾನೆ. ಹೀಗೆ ಜಗತ್ತಿನ ಪದಾರ್ಥಗಳ ಸುಸ್ಪಷ್ಟ ಹಾಗೂ ವ್ಯವಸ್ಥಿತ ಚಿತ್ರಣವನ್ನು ಈ ಎರಡು ಗ್ರಂಥಗಳು ನೀಡಿವೆ.

# ESSENTIALS OF DASAPRAKARANA

Prasthanatrayi viz., Upanisads, Brahmasutras and Bhagavadgita are the main source of Vedanta Philosophy. Sri Madhvacharya has naturally written the Bhasyas on these three. In addition he has written one more work on Gita Viz. Gitatatparya and three more works on brahmasutras Viz., Anubhasya, Anuvyakhyana and Nyayavivarana. In addition to the Bhasyas on Upanisads, he has also written a Bhasya on the forty hymns of Rigveda. Thus, Sri Madhvacharya has given an exhaustive exposition of Prasthanatrayi.

The doctrines presented in the Prasthanatrayi are further elaborated in two types of works Viz., vadagranthas and Prakaranagranthas. The vadagranthas raise long debates on the philosophical issues to examine the views of the other Schools of vedanta and the other systems of Philosophy. Anuvyakhyana itself is such a vadagrantha.The commentators Sri Jayatirtha, and Sri Vyasatirtha have further enriched the vadagrantha literature of Dvaita Vedanta. The Prakaranagranthas are small treatises on specific issues of philosophy.

Sri Madhvacharya has written ten such Prakarana works which are collectively known as Dasaprakaranas. These are neatly planned. Two of them viz., Pramana laksana and Kathalaksana deal with the epistemology and the Art of the Philosophical debate. Three treatises known as Khandanatraya examine the Advaita concepts of Mithyatva and Upadhi. Four treatises viz., Tatvasamkhyana, Tatvaviveka, Tatvodyota and Tatvanirnaya give an exposition of the central doctrine visnusarvottamatva and the other doctrines like the reality of the world, the five cordinal differences i.e., Panchabheda, the nature of the Jiva, the nature of the liberation etc. In the course of the presentation of these doctrines, the import of the important Sruti passages is discussed. The interpretations offered by the other Schools of Vedanta are reviewed Karmanirnaya the tenth Prakarana is a unique work. In this work by interpreting the Mahanamni hymns and by pointing out that Indra etc, all the names convey the Supreme God Visnu only, the philosophical import of even the Karmakanda portion

of the Vedas is brought out. In this way these ten Prakarana works assist the comprehension of the doctrines of Vedanta enshrined in the Prasthana trayi and elaborated in the Bhasyas. A brief account of the contents of the ten Prakaranas is given below.

**1. TATVASAMKHYANA 2. TATVAVIVEKA.**

In Tatvasamkhyana as the very name suggests the categories of the reality as conceived in Dvaita Vedanta are enumerated. This small text opens with the definition of a Tatva i.e., a real entity: 'That which is not superimposed is a real entity`. It is further explained as that which is the object of valid knowledge. For instance, when `A garland of flowers is comprehended as `A garland of flowers' then its object viz., the garland of flowers is a real entity. But when some one mistakes it as a snake from a distance or in a dark place, his comprehension is not valid knowledge. Consequently its object viz., Snake which is superimposed on a flower garland is not a real entity. It is Aropita i.e., superimposed, and hence it is not a Tatva i.e., a real entity. All those that satisfy this definition i.e., 'Tatvam Anarapitam` are Tatvas.

The Tatvas are first classified into two Svatantra i.e., independent and Paratantra i.e., dependent. The Supreme god alone is Svatantra i.e., independent category. All other categories are Paratantra. The Svatantra is defined as that which is independent in respect of its very essential nature, the functions, and the comprehension. The Supreme God is only independent in all these respects. All others are entirely dependent upon the Supreme God in all these respects. Therefore, all others are Paratantra i.e., Paramatmatantra.

The Paratantra is further classified as Bhava and Abhava i.e., the Positive and the Negative. 'That which presents itself as 'Is' in its first cognition is Positive' and 'that which present itself as 'Is not` in its first cognation is 'Negative`. The Bhava i.e., the Positive is classified into Chetana and Achetana i.e., sentient and non-sentient. The sentient is further classified as that which is never afflicted by the sorrow and those that are afflicted by the sorrow. Goddess Lakshmi only is never afflicted by the sorrow. She is nityamukta i.e., ever free from the bondage. All other sentient beings are afflicted by the sorrow sometime or the other. Further classification of these is given in the Text.

The non-sentient are classified into Nitya i.e., eternal and Anitya i.e., perishable, Nityanitya i.e., partly eternal and party modified. Veda, Varna and Avyakrta Akasa are eternal. Purana, Kala and Prakrti are partly eternal and partly changing.

The negative i.e., Abhava is classified into three viz., Pragabhava i.e., previous negation, Pradhvanasabhava i.e., later negation and Sadabhava i.e., total negation. In respect of Abhava two important points have to be noted. (1) Anyonyabhava is not accepted as a category of Abhava This is because, anyonyabhava i.e., Bheda, the distinction is considered as Dharmisvarupa i.e., and internal attribute of every entity. To be distinct from all other entities is the very nature of each entity, Therefore, this fact of being distinct from all other entities is part and parcel of the very nature of each entity. Therefore, it is not negative and hence is not to be considered as a category of Abhava. (2) The Sadabhava concept of Dvaita is distinct from the Sansargabhava or Atyantabhava concept of Nyaya Vaisesikas. The Sansargabhava of Nyayavaisesika could be easily included under Pragabhava, the absence before the Sansarga i.e., the contact, and under Pradhvansabhava after the contact is withdrawn, that is to say before the Jar is brought on the ground, it is Sansarga pragabhava and after the Jar is withdrawn from the ground it is Sansargapradhvansabhava. Therefore, there is no need to accept a separate type of Abhava called sansargabhava. In respect of the concept of Atyantabhava an important difference between the Nyaya concept and the Dvaita Concept is, the Pratiyogin of this Abhava is elsewhere present according to Nyaya view while according to the Dvaita it is only envisaged and denied. It is not a reference to that which is actually present elsewhere and its denial. Therefore, the Pratiyogin of this Abhava is apramanika i.e., not really existing elsewhere. This Abhava is an abhava

i.e., absence present at all three times i.e., past, present and future. That is why it is called Sadabhava.

Tatvaviveka also enumerates the categories more or less in the same way. This work contains the verses of a larger work of the same name composed by the god himself. Thirteen verse are quoted in this small work in support of the statements made in Tatvasamkhyana. Therefore, it is not a repetition but an extract of a source work to support Tatvasamkhyana. Naturally the two texts verbetum agree barring a few passages. The few verses that are differently worded of additional contain some significant points. There are as follows.

1) The achetana i.e., non-sentient is classified into two viz., Nitya and Anitya i.e., eternal and non-eternal. The third group i.e., Nityanitya is not mentioned. This does not involve any conflict between the statement of Tatvasamkhyana and Tatvaviveka. The items listed under Nityanitya have an eternal aspect and a modified aspect. From the first aspect point of view these are included under Nitya. The second aspect naturally goes under Anitya. In order to bring out these two aspects more clearly these are first listed under Nitya i.e., eternal, then, it is started that the modified forms of these are anitya. Some more items in addition to the items listed under Nitya and Nityanitya in Tatvasamkhyana are mentioned. The nature of the modification in respect of these items differs from item to item. This is explained in the commentaries.

2) In Tatvasankhyana Guna, Kriya, Jati etc, attributes are not mentioned. Here these are mentioned. These are classified into two groups viz., i) Yavad-dravyabhavi. i.e., The attributes that last as long as the substance lasts.
ii) Ayavad-dravyabhavi i.e., the attributes that perish even before. The relation between the substance and the attributes,in the former case is abheda while it is bedabheda in the case of the latter.

In Tatvasamkhyana the attributes are not separately mentioned keeping in view the fact that the attributesare not totally different from the substance. Here, these are mentioned to bring out the nature and the relation of the two types of the attributes.

Strictly speaking these two texts from one unit. Therefore, these additional statements do not indicate any difference of views on the respective issues.

The Classification of the categories in these two texts is quite different from the pattern followed in the texts of the other systems of Philosophy such as Nyayavaisesikas. The Nyayavaisesikas go by the pattern as Dravya, Guna etc. This is because, the objective of those systems is to provide the knowledge of the material world, while that of Dvaita Vedanta is to lead to the knowledge of the Supreme God. Therefore, the Supreme God is first stated as Svatantra bringing out his Supremacy and all other categories are brought under Paratantra indicating their dependence on the Supreme God. The other categories are to be known only to realise the supremacy and the glory of the God. The concluding verses of these two texts make this position abandantly clear. The last verse of Tatvasamkhyana enumarates the creation, sustainance, destruction etc, eight states of the world that are caused by the God and glorifies Him by giving his Sristyadi astakartriva definition. The concluding verse of Tatvaviveka emphatically states that it is the knowledge that the entire world consisting of Chetana and Achetana entirely depends upon the God that enables one to attain the liberation.

**Prof. K.T. Pandurangi**
Poornaprajna Vidyapeetha

ಶ್ರೀಆನಂದತೀರ್ಥಭಗವತ್ಪಾದಾಚಾರ್ಯವಿರಚಿತ

# ದಶಪ್ರಕರಣಗಳು

# ತತ್ವಸಂಖ್ಯಾನಮ್

ಶ್ರೀ ಫಲಿಮಾರು ಭಂಡಾರಕೆರೆ ಮಠಾಧೀಶರಾದ
ಶ್ರೀ ವಿದ್ಯಾಮಾನ್ಯತೀರ್ಥಶ್ರೀಪಾದರ
ಅನುವಾದದ ಸಂಗ್ರಹ

# ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯವಿರಚಿತಂ

# ತತ್ವಸಂಖ್ಯಾನಮ್

**॥ ಹರಿಃ ಓಂ ॥**

**ಸ್ವತಂತ್ರಂ ಅಸ್ವತಂತ್ರಂ ಚ ದ್ವಿವಿಧಂ ತತ್ವಮಿಷ್ಯತೇ ।**
**ಸ್ವತಂತ್ರೋ ಭಗವಾನ್ ವಿಷ್ಣುಃ ಭಾವಾಭಾವೌ ದ್ವಿಧೇತರತ್ ॥**

ಸ್ವತಂತ್ರವೆಂದೂ ಅಸ್ವತಂತ್ರವೆಂದೂ ತತ್ತ್ವವು ಎರಡು ಬಗೆಯಾಗಿ ಅಂಗೀಕರಿಸಲ್ಪಟ್ಟಿದೆ. ಸಂಪೂರ್ಣ ಐಶ್ವರ್ಯಾದಿ ಸದ್ಗುಣಗಳಿಂದ ಸಂಪನ್ನನಾದ ವಿಷ್ಣು ಸ್ವತಂತ್ರನು. ಅಸ್ವತಂತ್ರತತ್ವವು ಭಾವವೆಂದೂ ಅಭಾವವೆಂದೂ ಎರಡು ಬಗೆಯಾಗಿದೆ.

**ವಿವರಣೆ:—**ಮೋಕ್ಷವನ್ನು ಅಪೇಕ್ಷಿಸುವವನು ಶ್ರೀಪರಮಾತ್ಮನನ್ನು, ಸಕಲ ಜಗತ್ತಿನ ಉತ್ಪತ್ತಿ ಮೊದಲಾದುದಕ್ಕೆ ನಿಮಿತ್ತನನ್ನಾಗಿ ತಿಳಿದುಕೊಳ್ಳಬೇಕು. ಈ ಜ್ಞಾನವು ಜಗತ್ತಿನ ಜ್ಞಾನವಿಲ್ಲದೆ ಉಂಟಾಗಲಾರದು. ಆದ್ದರಿಂದ ಶಾಸ್ತ್ರದಲ್ಲಿ ಅಲ್ಲಲ್ಲಿ ಹೇಳಿದ, ಮುಖ್ಯನಾದ ಪರಮಾತ್ಮ ಮತ್ತು ಅಮುಖ್ಯವಾದ ಜಗತ್ತು ಈ ಎರಡು ತತ್ವಗಳನ್ನು ಸಂಗ್ರಹಿಸಿ ವಿವರಿಸುವುದು ಈ ಪ್ರಕರಣದ ಉದ್ದೇಶ.

ಭಾವ, ಅಭಾವ ಎಂದಾಗಲೀ ಚೇತನ, ಅಚೇತನ ಎಂದಾಗಲೀ ನಿತ್ಯ, ಅನಿತ್ಯ ಎಂದಾಗಲೀ ತತ್ವಗಳನ್ನು ವಿಂಗಡಿಸಬಹುದು. ಆದರೆ ಆ ರೀತಿ ತತ್ವಗಳನ್ನು ಪರಿಗಣನೆ ಮಾಡುವುದು ಗಂಗಾನದಿಯ ಉಸುಕಿನ ಗಣನೆಯಂತೆ ವ್ಯರ್ಥವಾಗುವುದು. ಸ್ವತಂತ್ರ ಅಸ್ವತಂತ್ರ ಎಂದು ವಿಭಾಗ ಮಾಡಿದರೆ, 'ಪರಮಾತ್ಮ ಒಬ್ಬನೇ ಸ್ವತಂತ್ರ, ಬೇರೆ ಎಲ್ಲವೂ ಅವನ ಅಧೀನವಾದದ್ದು' ಎಂಬ ಜ್ಞಾನ ಉಂಟಾಗುತ್ತದೆ. ಈ ಜ್ಞಾನವೇ ಮೋಕ್ಷಕ್ಕೆ ಕಾರಣ. ಆದ್ದರಿಂದ ಈ ರೀತಿಯ ವಿಭಾಗವೇ ಯುಕ್ತ.

ಜಗತ್ತಿನ ಸಕಲ ಪದಾರ್ಥಗಳ ಸ್ವಭಾವ, ಅವುಗಳಲ್ಲಿರುವ ಅಬಾಧಿತ ಧರ್ಮ ಹಾಗೂ ಅದರ ಕಾರ್ಯಜನನಶಕ್ತಿ ಇವೆಲ್ಲವೂ ಶ್ರೀಹರಿಯ ಅಧೀನಗಳಾಗಿವೆ. ಆದ್ದರಿಂದ ಲಕ್ಷ್ಮೀ ಮೊದಲಾದ ಎಲ್ಲ ತತ್ವಗಳೂ ಅಸ್ವತಂತ್ರಗಳು. ಬೇರೆಯವರ ಅಪೇಕ್ಷೆ ಇಲ್ಲದೆ, ಈ ಮೂರನ್ನು ಹೊಂದಿರುವ ಅವನೊಬ್ಬನೇ ಸ್ವತಂತ್ರ.



ಎಲ್ಲರೂ ಸ್ವತಂತ್ರರೇ ಆದರೆ ಯಾರಿಗೂ ದುಃಖವೇ ಆಗಬಾರದು, ಸರ್ವದಾ ಸುಖವೇ ಆಗಬೇಕು. ಸ್ವತಂತ್ರರಾದವರಿಗೆ ದುಃಖಕ್ಕೆ ಕಾರಣವಾದುದನ್ನು ಇಲ್ಲದಂತೆ ಮಾಡಿಕೊಳ್ಳಲು ಹಾಗೆಯೇ ಸುಖಕಾರಕವಾದುದನ್ನು ಹೊಂದಲು ಶಕ್ತಿ ಇರಬೇಕು. ಹೀಗಿದ್ದ ಮೇಲೆ ದುಃಖ ಹೇಗೆ ಬರಬೇಕು? ಸುಖ ಏಕೆ ಇಲ್ಲದಾಗಬೇಕು? ಆದ್ದರಿಂದ ಎಲ್ಲರೂ ಸ್ವತಂತ್ರರಲ್ಲ. ಇದರಂತೆ ಎಲ್ಲರೂ ಅಸ್ವತಂತ್ರರಾದರೆ ಅನವಸ್ಥಾದೋಷ ಬರುವುದು. ಏಕೆಂದರೆ, ಒಬ್ಬನು ಮತ್ತೊಬ್ಬನ ಅಧೀನ. ಅವನು ಇನ್ನೊಬ್ಬನ ಅಧೀನ. ಹೀಗೆ ಅಪ್ರಾಮಾಣಿಕವಾಗಿ ಕೊನೆಯಿಲ್ಲದ ಕಲ್ಪನೆಯು ದೋಷವಾಗುವುದು. 'ಅಸ್ವತಂತ್ರರಲ್ಲಿಯೇ ಕಡಿಮೆ ಸಾಮರ್ಥ್ಯ ಉಳ್ಳವರಿಗೆ ಅಧಿಕ ಸಾಮರ್ಥ್ಯವುಳ್ಳವರು ನಿಯಾಮಕರಾಗಬಹುದಲ್ಲ' ಎಂಬ ಆಕ್ಷೇಪ ಸರಿಯಲ್ಲ. ಅಧಿಕ ಸಾಮರ್ಥ್ಯ ಉಳ್ಳವರು ಅಲ್ಪಸಾಮರ್ಥ್ಯ ಉಳ್ಳವರಿಂದ ಬಾಹ್ಯಕ್ರಿಯೆಯನ್ನು ಮಾಡಿಸಬಹುದು. ಆಂತರಿಕ ಬುದ್ಧಿಪ್ರೇರಣೆ ಮಾಡಲು ಸಮರ್ಥರಲ್ಲ. 'ಆತ್ಮಾನಾಂ ಅಂತರೋ ಯಮಯತಿ' ಮುಂತಾದ ವೇದವಾಕ್ಯಗಳು 'ಪರಮಾತ್ಮನು ಜೀವರೊಳಗಿದ್ದು ಪ್ರೇರಕನಾಗಿದ್ದಾನೆ' ಎಂದು ಹೇಳುತ್ತವೆ. ಹಾಗಾಗಿ ಅವನೇ ಸ್ವತಂತ್ರನೆಂದೂ, ಉಳಿದ ಎಲ್ಲಾ ತತ್ವಗಳೂ ಅಸ್ವತಂತ್ರಗಳೆಂದೂ ಹೇಳಿದಂತಾಗುವುದರಿಂದ ಇದರ ವಿರೋಧವೂ ಬರುತ್ತದೆ. ಆದ್ದರಿಂದ ಸ್ವತಂತ್ರ, ಅಸ್ವತಂತ್ರ ಎಂದು ಎರಡು ತತ್ವಗಳನ್ನು ಒಪ್ಪಲೇಬೇಕು.

ಮೊದಲು ತಿಳಿಯುವಾಗಲೇ ಯಾವುದು 'ಇದೆ' ಎಂದು ತೋರುವುದೋ ಅದು ಭಾವವಸ್ತು. ಉದಾಹರಣೆಗೆ- 'ಇಲ್ಲಿ ನೀರು ಇದೆ'. ನೀರು ಎಂಬುದು ಭಾವವಸ್ತು. ಇದು ಆಮೇಲೆ ನಿಷೇಧರೂಪವಾಗಿ ತೋರಬಹುದು. ಉದಾಹರಣೆಗೆ- 'ಆ ನೀರು ಬಿಸಿ ಅಲ್ಲ'. ಆದರೆ ಮೊದಲು ಅದು ವಿಧಿರೂಪವಾಗಿ ತೋರಿಯೇ ಆಮೇಲೆ ಹೀಗೆ ನಿಷೇಧ ರೂಪವಾಗಿ ತೋರುತ್ತದೆ. ಆದ್ದರಿಂದ ಮೊದಲಿಗೆ ಯಾವುದು ಇದೆ ಎಂದು ವಿಧಿ ರೂಪವಾಗಿ ತಿಳಿಯಲ್ಪಡುವುದೋ ಅದು ಭಾವ ಎನಿಸುತ್ತದೆ. ಇದಕ್ಕೆ ವಿರುದ್ಧವಾಗಿ ಆರಂಭದ ತಿಳುವಳಿಕೆಯಲ್ಲೇ ಯಾವುದು 'ಇಲ್ಲ' ಎಂದು ನಿಷೇಧ ರೂಪವಾಗಿ ಗ್ರಹಿಸಲ್ಪಡುವುದೋ ಅದು 'ಅಭಾವ'. ಉದಾಹರಣೆಗೆ- 'ಇಲ್ಲಿ ನೀರು ಇಲ್ಲ'. ಇಲ್ಲಿ 'ಜಲಾಭಾವ' ಎಂಬ ವಸ್ತುವು ನಿಷೇಧ ರೂಪವಾಗಿ ಗ್ರಹಿಸಲ್ಪಟ್ಟಿದೆ. ಈ ಅಭಾವವು ಎರಡನೇ ಜ್ಞಾನದಲ್ಲಿ ವಿಧಿ ರೂಪವಾಗಿಯೂ ತಿಳಿಯಲ್ಪಡುತ್ತದೆ- 'ಇಲ್ಲಿ ನೀರಿನ ಅಭಾವವಿದೆ'. ಹೀಗೆ ಮೊದಲು ವಿಧಿ ರೂಪವಾಗಿ ತೋರುವ ವಸ್ತು ಭಾವ, ನಿಷೇಧರೂಪವಾಗಿ ತೋರುವ ವಸ್ತು ಅಭಾವ.

**ಪ್ರಾಕ್‌ಪ್ರಧ್ವಂಸಸದಾತ್ವೇನ ತ್ರಿವಿಧೋಽಭಾವ ಇಷ್ಯತೇ ॥**

ಅಭಾವವು ಮೂರು ವಿಧ – ಪ್ರಾಗಭಾವ, ಪ್ರಧ್ವಂಸಾಭಾವ, ಸದಾಭಾವ.

**ವಿವರಣೆ:—**ಪ್ರಾಕ್=ವಸ್ತುವು ಹುಟ್ಟುವ ಮೊದಲು, ಇರುವ ಅಭಾವ ಪ್ರಾಗಭಾವ.

'ನೀರು ಇಂದು ಇಲ್ಲ, ನಾಳೆ ಬರುತ್ತದೆ' ಎಂದಾಗ ಇಂದು ಇರುವ ನೀರಿನ ಅಭಾವ ಪ್ರಾಗಭಾವ. ಈ ಅಭಾವಕ್ಕೆ ಉತ್ಪತ್ತಿ ಇಲ್ಲ. ನಾಳೆ ಬರುವ ನೀರು ಹಿಂದೆ ಎಂದೂ ಇರಲಿಲ್ಲ. ಆದ್ದರಿಂದ ಅದರ ಅಭಾವ ಅನಾದಿಕಾಲದಿಂದ ಇದೆ, ನಾಳೆ ಇಲ್ಲದಾಗುತ್ತದೆ. ಹೀಗೆ ಪ್ರಾಗಭಾವಕ್ಕೆ ಹುಟ್ಟು ಇಲ್ಲ, ನಾಶ ಇದೆ. ಹುಟ್ಟಿದ ವಸ್ತುವು ನಾಶವಾದ ಬಳಿಕ ಇರುವ ಅಭಾವ ಪ್ರಧ್ವಂಸ. ಈ ಪ್ರಧ್ವಂಸಾಭಾವವು ವಸ್ತುವು ನಾಶವಾದಾಗ ಹುಟ್ಟುತ್ತದೆ. ಹುಟ್ಟಿದ ಮೇಲೆ ನಿರಂತರವಾಗಿ ಇರುತ್ತದೆ. ಹೀಗೆ ಅದಕ್ಕೆ ಹುಟ್ಟು ಇದೆ. ನಾಶ ಇಲ್ಲ. ಮೊಲದ ಕೋಡು ಅಸತ್ಯ. ಅದರ ಅಭಾವ ಯಾವಾಗಲೂ ಇದೆ. ಆದ್ದರಿಂದ ಅದು 'ಸದಾಭಾವ'.

'ನೀರು ಬೆಂಕಿ ಅಲ್ಲ' ಎನ್ನುವುದು ಅನ್ಯೋನ್ಯಾಭಾವ, ಭೇದ. ಅದು ಹಿಂದೆ ಹೇಳಿದ ಮೂರರಲ್ಲೂ ಸೇರದ ನಾಲ್ಕನೆಯ ಅಭಾವ ಎಂದು ಕೆಲವರು ಹೇಳುತ್ತಾರೆ. ಆದರೆ ಭೇದವು ಯಾವ ವಸ್ತುವಿನಲ್ಲಿ ಇರುವುದೋ ಆ ವಸ್ತುವಿನ ಸ್ವರೂಪವೇ ಆಗಿರುತ್ತದೆ. ನಾವು ಒಂದು ವಸ್ತುವನ್ನು ತಿಳಿಯುವಾಗಲೇ ಅದು 'ಇತರ ವಸ್ತುಗಳಿಗಿಂತ ಬೇರೆಯಾಗಿದೆ' ಎಂದೂ ತಿಳಿಯುತ್ತೇವೆ. ಭೇದವು ವಸ್ತುವಿಗಿಂತ ಬೇರೆಯಾದರೆ ಕೆಲವೊಮ್ಮೆ ವಸ್ತು ಮಾತ್ರ ತೋರಿ ಭೇದವು ತೋರದೇ ಇರಬಹುದು. ಆಗ 'ಇವನು ಮನುಷ್ಯ' ಎಂದು ತಿಳಿದಾಗ 'ಇವನು ಮನುಷ್ಯನೋ ಅಥವಾ ಮರವೋ' ಎಂಬ ಸಂಶಯ ಬರಬೇಕಾದೀತು. ಆದ್ದರಿಂದ ಆಯಾಯ ವಸ್ತುಗಳಲ್ಲಿರುವ ಇತರ ವಸ್ತುಗಳ ಭೇದವು ಆ ವಸ್ತುವಿನ ಸ್ವರೂಪವೇ ಆಗಿದೆ. ಹೀಗೆ ಭೇದವು ಭಾವ ಅಥವಾ ಅಭಾವದಲ್ಲೇ ಸೇರುತ್ತದೆ. ಅದು ಪ್ರತ್ಯೇಕ ವಸ್ತುವೇ ಅಲ್ಲ.

**ಚೇತನಾಚೇತನತ್ವೇನ ಭಾವೋಽಪಿ ದ್ವಿವಿಧೋ ಮತಃ ।**

ಅಭಾವ ಮೂರು ವಿಧವಾಗಿರುವಂತೆ ಭಾವವೂ ಚೇತನ, ಅಚೇತನ ಎಂದು ಎರಡು ವಿಧವಾಗಿದೆ.

**ವಿವರಣೆ:—**'ಚೇತಯತಿ ಇತಿ ಚೇತನಃ'. ಜ್ಞಾನವುಳ್ಳ ವಸ್ತು ಚೇತನ. ಜ್ಞಾನವಿಲ್ಲದ ವಸ್ತು ಅಚೇತನ.

**ದುಃಖಸ್ಪೃಷ್ಟಂ ತದಸ್ಪೃಷ್ಟಂ ಇತಿ ದ್ವೇಧೈವ ಚೇತನಮ್ ।**
**ನಿತ್ಯಾದುಃಖಾ ರಮಾಽನ್ಯೇ ತು ಸ್ಪೃಷ್ಟದುಃಖಾಃ ಸಮಸ್ತಶಃ ॥**

ದುಃಖಸ್ಪೃಷ್ಟರು ಮತ್ತು ದುಃಖಾಸ್ಪೃಷ್ಟರೆಂದು ಪರತಂತ್ರ ಚೇತನರು ಎರಡು ವಿಧರಾಗಿರುವರು. ಎಂದೂ ದುಃಖವಿಲ್ಲದ ರಮೆಯ ದುಃಖಾಸ್ಪೃಷ್ಟಳು. ಇವಳನ್ನು ಬಿಟ್ಟು ಉಳಿದ ಸಮಸ್ತ ಚೇತನರೂ ದುಃಖಸಂಬಂಧವಿರುವವ ರಾದುದರಿಂದ ದುಃಖಸ್ಪೃಷ್ಟರು.

**ವಿವರಣೆ:—**ಮಾಯಾವಾದಿಗಳು ದುಃಖವನ್ನು ಮಿಥ್ಯಾ ಎಂದು ಹೇಳುತ್ತಾರೆ.



ಅವರು ಮತದ ಪ್ರಕಾರ ಯಥಾರ್ಥವಾಗಿ ದುಃಖಸ್ಪೃಷ್ಟ ಚೇತನವೇ ಇಲ್ಲ. ತಾರ್ಕಿಕರು 'ಪರತಂತ್ರ ಚೇತನರೆಲ್ಲರಿಗೂ ದುಃಖದ ಸಂಬಂಧ ಇದ್ದೇ ಇದೆ' ಎಂದು ಹೇಳುತ್ತಾರೆ. ಈ ಎರಡೂ ಮತಗಳನ್ನು ನಿರಾಕರಿಸಲು 'ದ್ವೇಧೈವ' ಎಂದು 'ಏವ' ಶಬ್ದವನ್ನು ಆಚಾರ್ಯರು ಪ್ರಯೋಗಿಸಿದ್ದಾರೆ. 'ಪರತಂತ್ರ ಚೇತನರಲ್ಲಿ ಈ ಎರಡು ಬಗೆಯು ಇದ್ದೇ ಇದೆ' ಎಂದು ಅರ್ಥ.

'ನಾನು ದುಃಖಿಯಾಗಿದ್ದೇನೆ' ಎಂಬ ಅನುಭವವು ಸಾಕ್ಷಿಸಿದ್ಧವಾದುದರಿಂದ ದುಃಖವನ್ನು ಮಿಥ್ಯಾ ಎಂದು ಹೇಳುವುದು ಯುಕ್ತವಲ್ಲ. 'ನಿರ್ದುಃಖೋ ಹಿ ಹರಿಃ ನಿತ್ಯಂ ಶ್ರೀಶ್ಚಾನ್ಯೇ ದುಃಖಭಾಗಿನಃ' ಎಂಬ ಆಗಮವು ಪರತಂತ್ರಳಾದ ಲಕ್ಷ್ಮೀದೇವಿಗೂ ಎಂದೂ ದುಃಖವಿಲ್ಲ ಎಂದು ಹೇಳುತ್ತದೆ. ಇದರ ವಿರೋಧ ಬರುವುದರಿಂದ 'ಪರತಂತ್ರವೆಲ್ಲವೂ ದುಃಖಸ್ಪೃಷ್ಟ' ಎಂಬ ತಾರ್ಕಿಕ ಮತವೂ ಸಮಂಜಸವಲ್ಲ.

ಸ್ವತಂತ್ರನಾದವನಿಗೆ ಎಂದೂ ದುಃಖವಿರಲು ಸಾಧ್ಯವಿಲ್ಲ. ಶ್ರೀಹರಿಯು ಸ್ವತಂತ್ರ. ಆದುದರಿಂದಲೇ ಅವನಿಗೆ ದುಃಖವಿಲ್ಲವೆಂದು ಸಿದ್ಧವಾಗುತ್ತದೆ. ಅದಕ್ಕಾಗಿ ಆಚಾರ್ಯರು ವಿಷ್ಣುವಿಗೆ ಪ್ರತ್ಯೇಕವಾಗಿ ದುಃಖಾಸ್ಪೃಷ್ಟತ್ವವನ್ನು ಹೇಳಲಿಲ್ಲ.

ಕೆಲವರು 'ಗರುಡ, ಶೇಷ, ವಿಷ್ವಕ್ಸೇನ ಮೊದಲಾದ ಸಮಷ್ಟಿ ಜೀವರೂ ದುಃಖಾಸ್ಪೃಷ್ಟರು' ಎಂದು ಹೇಳುತ್ತಾರೆ. ಆದರೆ ಅವರಿಗೂ ದುಃಖಸಂಬಂಧವಿರುವುದ ರಿಂದ ಈ ಮತವು ಯುಕ್ತವಲ್ಲ ಎಂದು ತಿಳಿಸಲು 'ಸಮಸ್ತಶಃ' ಎಂಬ ಶಬ್ದವನ್ನು ಆಚಾರ್ಯರು ಪ್ರಯೋಗಿಸಿದ್ದಾರೆ. 'ರಮೆಯಿಂದ ಬೇರೆಯಾದ ಸಮಸ್ತರೂ ದುಃಖಸಂಬಂಧವುಳ್ಳವರು' ಎಂದು ಇದರ ಅರ್ಥ. 'ಅನ್ಯೇ ದುಃಖಭಾಗಿನಃ' ಎಂದು ಹಿಂದೆ ಹೇಳಿದ ಪ್ರಮಾಣದ ಆಧಾರವಿರುವುದರಿಂದ ಗರುಡಾದಿಗಳೂ ದುಃಖಸ್ಪೃಷ್ಟರೆಂದು ತಿಳಿಸಿದಂತಾಯಿತು.

**ಸ್ಪೃಷ್ಟದುಃಖಾ ವಿಮುಕ್ತಾಶ್ಚ ದುಃಖಸಂಸ್ಥಾ ಇತಿ ದ್ವಿಧಾ ।**
**ದುಃಖಸಂಸ್ಥಾ ಮುಕ್ತಿಯೋಗ್ಯಾ ಅಯೋಗ್ಯಾ ಇತಿ ಚ ದ್ವಿಧಾ ।**
**ದೇವರ್ಷಿ ಪಿತೃ ಪ ನರಾ ಇತಿ ಮುಕ್ತಾಸ್ತು ಪಂಚಧಾ ॥**

ದುಃಖಸ್ಪೃಷ್ಟರಾದ ಚೇತನರು ಎರಡು ವಿಧವಾಗಿರುವರು- ದುಃಖ ದಿಂದ ಬಿಡುಗಡೆ ಹೊಂದಿದವರು ಮತ್ತು ಇನ್ನೂ ದುಃಖವನ್ನು ಅನುಭವಿಸು ತ್ತಿರುವವರು. ದುಃಖವನ್ನು ಅನುಭವಿಸುತ್ತಿರುವವರೂ ಎರಡು ವಿಧವಾಗಿದ್ದಾರೆ. ಮುಕ್ತಿಯೋಗ್ಯರು ಮತ್ತು ಮುಕ್ತ್ಯಯೋಗ್ಯರು. ದುಃಖದಿಂದ ಬಿಡುಗಡೆ ಹೊಂದಿದ ಮುಕ್ತರೂ ಐದು ವಿಧವಾಗಿದ್ದಾರೆ- ದೇವತೆಗಳು, ಋಷಿಗಳು, ಪಿತೃಗಳು, ಚಕ್ರವರ್ತಿಗಳು ಮತ್ತು ಮನುಷ್ಯೋತ್ತಮರು.

**ವಿವರಣೆ:—**ಪಿತೃಪ ಎಂಬಲ್ಲಿರುವ ‘ಪ’ ಶಬ್ದಕ್ಕೆ ಪಾಲಿಸುವವರು ಎಂದರ್ಥ. ಚಕ್ರವರ್ತಿಗಳು ಎಂದು ತಾತ್ಪರ್ಯ. ನರರೆಂದರೆ ಮನುಷ್ಯರಲ್ಲಿ ಉತ್ತಮರು.

‘ಮುಕ್ತಿಯಲ್ಲಿ ಮನುಷ್ಯತ್ವಾದಿ ಜಾತಿಗಳು ನಾಶಹೊಂದುವುದರಿಂದ ತಾರತಮ್ಯವೇ ಇರುವುದಿಲ್ಲ’ ಎಂದು ಕೆಲವರು ಹೇಳುತ್ತಾರೆ. ಮುಕ್ತಿಯಲ್ಲಿಯೂ ಮನುಷ್ಯತ್ವಾದಿ ಜಾತಿಗಳು ಇವೆ. ಆದ್ದರಿಂದ ಅಲ್ಲಿಯೂ ತಾರತಮ್ಯ ಇದ್ದೇ ಇದೆ. ಇದನ್ನು ‘ಮುಕ್ತಾಸ್ತು’ ಎಂಬಲ್ಲಿರುವ ‘ತು’ ಶಬ್ದವು ಹೇಳುತ್ತದೆ. ‘ತು’ ಎಂದರೆ ‘ಏವ’ ಎಂದರ್ಥ. ಅದನ್ನು ಪಂಚಧಾ ಎಂಬಲ್ಲಿ ಸೇರಿಸಿಕೊಂಡರೆ ‘ಪಂಚಧೈವ’ ‘ಐದು ವಿಧವಾಗಿಯೇ ಇದ್ದಾರೆ’ ಎಂದು ಅದರ ಅರ್ಥ.

**ಏವಂ ವಿಮುಕ್ತಿಯೋಗ್ಯಾಶ್ಚ ತಮೋಗಾಃ ಸೃತಿಸಂಸ್ಥಿತಾಃ ।**
**ಇತಿ ದ್ವಿಧಾ ಮುಕ್ತ್ಯಯೋಗ್ಯಾಃ, ದೈತ್ಯ ರಕ್ಷಃ ಪಿಶಾಚಕಾಃ ।**
**ಮರ್ತ್ಯಾಧಮಾಶ್ಚತುರ್ಧೈವ ತಮೋಯೋಗ್ಯಾಃ ಪ್ರಕೀರ್ತಿತಾಃ ।**
**ತೇ ಚ ಪ್ರಾಪ್ತಾಂಧತಮಸಃ ಸೃತಿಸಂಸ್ಥಾ ಇತಿ ದ್ವಿಧಾ ॥**

ಮುಕ್ತರಂತೆಯೇ ಮುಕ್ತಿಯೋಗ್ಯರೂ ದೇವತೆಗಳು, ಋಷಿಗಳು, ಪಿತೃಗಳು, ಚಕ್ರವರ್ತಿಗಳು ಮತ್ತು ಮನುಷ್ಯೋತ್ತಮರು ಎಂದು ಐದು ವಿಧವಾಗಿದ್ದಾರೆ. ತಮೋಯೋಗ್ಯರು ಮತ್ತು ನಿತ್ಯಸಂಸಾರಿಗಳು ಎಂದು ಮುಕ್ತ್ಯಯೋಗ್ಯರು ಎರಡು ವಿಧರು. ದೈತ್ಯರು, ರಾಕ್ಷಸರು, ಪಿಶಾಚರು ಮತ್ತು ಮನುಷ್ಯಾಧಮರು ಹೀಗೆ ತಮೋಯೋಗ್ಯರು ನಾಲ್ಕು ಪ್ರಭೇದವುಳ್ಳವರಾಗಿ ಆಗಮದಲ್ಲಿ ಪ್ರತಿಪಾದಿಸಲ್ಪಟ್ಟಿದ್ದಾರೆ. ಈ ಎಲ್ಲಾ ತಮೋಯೋಗ್ಯರೂ ತಮಸ್ಸನ್ನು ಹೊಂದಿದವರು ಮತ್ತು ಈಗ ಸಂಸಾರದಲ್ಲಿರುವವರು ಎಂದು ಎರಡು ವಿಧವಾಗಿರುವವರು.

**ವಿವರಣೆ :—** ಮರ್ತ್ಯಾಧಮಾಸ್ತಾಮಸಾಸ್ತು ದೈತ್ಯರಕ್ಷಃಪಿಶಾಚಕಾಃ ।
ಸ್ವರೂಪಭೂತ ವಿದ್ವೇಷಾ ಅಧೋ ಗಚ್ಛಂತಿ ತೇ ತಮಃ ॥

ತಮೋಯೋಗ್ಯರ ನಾಲ್ಕು ಪ್ರಭೇದಗಳನ್ನು ಹೇಳುವ ಮೇಲಿನ ಆಗಮವು ಐತರೇಯ ಭಾಷ್ಯದಲ್ಲಿ ಆಚಾರ್ಯರಿಂದ ಉದಾಹರಿಸಲ್ಪಟ್ಟಿದೆ.

**ನಿತ್ಯಾನಿತ್ಯವಿಭಾಗೇನ ತ್ರಿಧೈವಾಚೇತನಂ ಮತಂ ।**

ನಿತ್ಯಾನಿತ್ಯ, ನಿತ್ಯ, ಅನಿತ್ಯ ಹೀಗೆ ಅಚೇತನವು ಮೂರು ವಿಧವಾಗಿದೆಯೆಂದು ಸಮ್ಮತವಾಗಿದೆ.

**ವಿವರಣೆ:—**‘‘ಎಲ್ಲಾ ವಸ್ತುಗಳು ಹುಟ್ಟಿ ಒಂದು ಕ್ಷಣವಿದ್ದು ಮರುಕ್ಷಣ



ನಾಶಹೊಂದುತ್ತವೆ. ಆದ್ದರಿಂದ ಎಲ್ಲವೂ ಕ್ಷಣಿಕ’ ಎನ್ನುತ್ತಾರೆ ಬೌದ್ಧರು. ‘ಮಡಿಕೆಯು ಮಣ್ಣಿನಲ್ಲಿ ಮೊದಲೆ ಅವ್ಯಕ್ತವಾಗಿತ್ತು. ಕುಂಬಾರನ ಕ್ರಿಯೆಯಿಂದ ಅದು ವ್ಯಕ್ತವಾಗುತ್ತದೆ. ಕೊನೆಗೆ ಮಣ್ಣಾಗುತ್ತದೆ. ಹೀಗೆ ಎಲ್ಲ ವಸ್ತುಗಳೂ ನಿತ್ಯವೇ ಆಗಿವೆ’ ಎಂದು ಸಾಂಖ್ಯರ ಸಿದ್ಧಾಂತ. ನಿತ್ಯ ಅನಿತ್ಯ ಎಂದು ಎರಡುತತ್ವಗಳನ್ನು ಅಂಗೀಕರಿಸುವವರೂ ಒಂದು ವಸ್ತುವು ನಿತ್ಯವೂ ಅನಿತ್ಯವೂ ಆಗುವುದು ವಿರುದ್ಧವಾದುದರಿಂದ ನಿತ್ಯಾನಿತ್ಯವೆಂಬ ತತ್ವವನ್ನು ಅಂಗೀಕರಿಸಿಲ್ಲ. ಆಚಾರ್ಯರು ‘ತ್ರಿಧೈವ-ಮೂರು ವಿಧವೇ ಆಗಿದೆ’ ಎಂದು ಹೇಳಿ ಹಿಂದೆ ಹೇಳಿದ ಮೂರೂ ಸಿದ್ಧಾಂತಗಳನ್ನು ನಿರಾಕರಿಸಿದ್ದಾರೆ.

**ನಿತ್ಯಾ ವೇದಾಃ ಪುರಾಣಾದ್ಯಾಃ ಕಾಲಃ ಪ್ರಕೃತಿರೇವ ಚ ।**
**ನಿತ್ಯಾನಿತ್ಯಂ ತ್ರಿಧಾ ಪ್ರೋಕ್ತಂ........... ॥**

ವೇದಗಳು ನಿತ್ಯವಾದ ಅಚೇತನ ತತ್ವಗಳು. ಪುರಾಣವೇ ಮೊದಲಾದ ಪುರುಷ ನಿರ್ಮಿತ ಗ್ರಂಥಗಳು. ಕಾಲ ಮತ್ತು ಪ್ರಕೃತಿ ಹೀಗೆ ನಿತ್ಯಾನಿತ್ಯವಾದ ತತ್ವಗಳು ಮೂರು ವಿಧವಾಗಿವೆ ಎಂದು ಶಾಸ್ತ್ರದಲ್ಲಿ ಹೇಳಲ್ಪಟ್ಟಿದೆ.

**ವಿವರಣೆ :—** ನಿತ್ಯಾ ವೇದಾಃ ಸಮಸ್ತಾಶ್ಚ ಶಾಶ್ವತಾ ವಿಷ್ಣುಬುದ್ಧಿಗಾಃ ।
ಸರ್ಗೇ ಸರ್ಗೇಽಮುನೈವೇತೇ ಉದ್ಗೀರ್ಯಂತೇ ತಥೈವ ಚ ।
ತತ್ಕ್ರಮೇಣೈವ ತೈರ್ವರ್ಣೈಃ ತೈಃ ಸರ್ವೈರೇವ ನಾನ್ಯಥಾ ॥

‘ವೇದಗಳು ಎಲ್ಲವೂ ನಿತ್ಯವಾಗಿವೆ. ಅವು ಯಾವಾಗಲೂ ವಿಷ್ಣುವಿನ ಜ್ಞಾನಕ್ಕೆ ಗೋಚರವಾಗಿವೆ. ಪರಮಾತ್ಮನು ಸೃಷ್ಟಿಯ ಆದಿಯಲ್ಲಿ ಅವುಗಳನ್ನು ಒಂದೇ ರೀತಿಯಿಂದ ಉಚ್ಚರಿಸುತ್ತಾನೆ. ವೇದಗಳ ವರ್ಣಗಳು, ವರ್ಣಗಳ ಕ್ರಮಗಳು, ಸ್ವರಗಳು ಇವು ಯಾವುವೂ ಎಂದೂ ವ್ಯತ್ಯಾಸಗೊಳ್ಳಲಾರವು’ ಎಂಬ ಪ್ರಮಾಣದಂತೆ ವೇದಗಳು ನಿತ್ಯವಾಗಿವೆ. ವೇದಗಳಂತೆಯೇ ಐವತ್ತು ವರ್ಣಗಳು, ಅವ್ಯಾಕೃತ ಆಕಾಶ ಇವೆಲ್ಲವೂ ನಿತ್ಯವೆಂದು ತಿಳಿಯಬೇಕು.

ಪುರಾಣಾದಿಗಳು ವೇದಗಳಂತೆ ನಿತ್ಯಗಳಲ್ಲ. ಅವುಗಳನ್ನು ಪರಮಾತ್ಮನು ಪ್ರತಿಕಲ್ಪದ ಆದಿಯಲ್ಲೂ ಶಬ್ದ ವಾಕ್ಯಗಳ ಕ್ರಮವನ್ನು ವ್ಯತ್ಯಾಸ ಮಾಡಿ ಉಪದೇಶಿಸುತ್ತಾನೆ. ಆದ್ದರಿಂದ ಅವುಗಳಿಗೆ ಉತ್ಪತ್ತಿ ಇದೆ. ಒಮ್ಮೆ ಸೃಷ್ಟಿಯಾದ ಪುರಾಣಗಳು ಭಗವಂತನ ಬುದ್ಧಿಯಲ್ಲಿ ಅಳಿಯದೇ ಉಳಿಯುವುದರಿಂದ ಅವುಗಳಿಗೆ ನಾಶವಿಲ್ಲ. ಹೀಗೆ ಉತ್ಪತ್ತಿ ಇರುವುದರಿಂದ ಪುರಾಣಾದಿಗಳು ಸರ್ವಥಾ ನಿತ್ಯವೂ ಅಲ್ಲ. ನಾಶ ಇಲ್ಲದೇ ಇರುವುದರಿಂದ, ಬಟ್ಟೆ ಮೊದಲಾದ ವಸ್ತುಗಳಂತೆ ಸರ್ವಥಾ ಅನಿತ್ಯವೂ ಅಲ್ಲ. ಆದ್ದರಿಂದ ನಿತ್ಯಾನಿತ್ಯಗಳು.

ಕ್ಷಣ ದಿನಾದಿಗಳ ನಿರಂತರ ಪ್ರವಾಹವೇ ಕಾಲ. ಕ್ಷಣ, ದಿನ ಮುಂತಾದವುಗಳು

ಹುಟ್ಟುತ್ತವೆ, ನಾಶವಾಗುತ್ತವೆ. ಆದುದರಿಂದ ಕಾಲವು ಅನಿತ್ಯವೆನಿಸಿದೆ. ಆದರೆ ಕ್ಷಣ ದಿನಗಳ ಪ್ರವಾಹಕ್ಕೆ ನಾಶವಿಲ್ಲ. ಎಂದೂ ಅದು ಇಲ್ಲವೆಂದಾಗುವುದಿಲ್ಲ. ಹೀಗೆ ಕಾಲದ ಏಕದೇಶಕ್ಕೆ ಉತ್ಪತ್ತಿನಾಶವಿದ್ದರೂ, ಪ್ರವಾಹರೂಪಕ್ಕೆ ನಾಶವಿಲ್ಲದಿರುವುದರಿಂದ ಅದು ಸರ್ವಥಾ ಅನಿತ್ಯವಲ್ಲ, ನಿತ್ಯವೂ ಆಗುತ್ತದೆ. ಈ ಕಾರಣದಿಂದ ಕಾಲವು ನಿತ್ಯಾನಿತ್ಯ.

ಜಡಪ್ರಕೃತಿಯು ಪರಿಣಾಮಗೊಂಡು ಮಹತ್ತತ್ತ್ವವೆಂಬ ಅವಸ್ಥೆಯನ್ನು ತಾಳುತ್ತದೆ. 'ವಿಕಾರೋऽವ್ಯಕ್ತಜನ್ಮ ಹಿ' 'ಮಹದಾದಿರೂಪದಿಂದ ವಿಕಾರಗೊಳ್ಳುವುದೇ ಜಡಪ್ರಕೃತಿಯ ಜನ್ಮ'. ಜಡಪ್ರಕೃತಿಯ ಈ ಮಹತ್ತತ್ತ್ವ ಎಂಬ ಸ್ಥೂಲ ಅವಸ್ಥೆಗೆ ಉತ್ಪತ್ತಿ ನಾಶವಿರುವುದರಿಂದ ಅದು ಈ ರೂಪದಿಂದ ಅನಿತ್ಯ. ಆದರೆ ಸೂಕ್ಷ್ಮರೂಪವಾದ ಪ್ರಕೃತಿಯ ಸ್ವರೂಪಕ್ಕೆ ನಾಶವೂ ಇಲ್ಲ, ಉತ್ಪತ್ತಿಯೂ ಇಲ್ಲ. ಹೀಗೆ ರೂಪಾಂತರಕ್ಕೆ ಉತ್ಪತ್ತಿ - ನಾಶವಿದ್ದು, ಸ್ವರೂಪಕ್ಕೆ ಉತ್ಪತ್ತಿ-ನಾಶವಿಲ್ಲದಿರುವುದರಿಂದ ಜಡಪ್ರಕೃತಿಯು ನಿತ್ಯಾನಿತ್ಯವಾಗಿದೆ.

**............. ಅನಿತ್ಯಂ ದ್ವಿವಿಧಂ ಮತಂ ।**

**ಅಸಂಸೃಷ್ಟಂ ಚ ಸಂಸೃಷ್ಟಂ, ಅಸಂಸೃಷ್ಟಂ ಮಹಾನಹಂ ।**

**ಬುದ್ಧಿರ್ಮನಃ ಖಾನಿ ದಶಮಾತ್ರಾ ಭೂತಾನಿ ಪಂಚ ಚ ।**

**ಸಂಸೃಷ್ಟಮಂಡಂ ತದ್ಗಂ ಚ ಸಮಸ್ತಂ ಸಂಪ್ರಕೀರ್ತಿತಮ್ ॥**

ಅನಿತ್ಯತತ್ವವು ಅಸಂಸೃಷ್ಟವೆಂದೂ ಸಂಸೃಷ್ಟವೆಂದೂ ಎರಡು ವಿಧವಾಗಿದೆ. ಮಹತ್ತತ್ತ್ವ, ಅಹಂಕಾರತತ್ವ, ಬುದ್ಧಿತತ್ವ, ಮನಸ್ಸು, ಕಣ್ಣು ಮೊದಲಾದ ಐದು ಜ್ಞಾನೇಂದ್ರಿಯಗಳು, ನಾಲಿಗೆ ಮೊದಲಾದ ಐದು ಕರ್ಮೇಂದ್ರಿಯಗಳು, ಶಬ್ದಾದಿ ಐದು ತನ್ಮಾತ್ರೆಗಳು, ಪಂಚಭೂತಗಳು ಹೀಗೆ ಒಟ್ಟು ಇಪ್ಪತ್ತನಾಲ್ಕು ತತ್ವಗಳು ಅಸಂಸೃಷ್ಟಗಳೆನಿಸುವುವು. ಬ್ರಹ್ಮಾಂಡವೂ ಅದರೊಳಗಿನ ಸಮಸ್ತವೂ ಸಂಸೃಷ್ಟವೆನಿಸುವುವು.

**ವಿವರಣೆ:**—ಚೆನ್ನಾಗಿ ಸೃಷ್ಟಿಯಾದುದು ಸಂಸೃಷ್ಟ. ಬ್ರಹ್ಮಾಂಡ ಮತ್ತು ಅದರೊಳಗಿನ ವಸ್ತುಗಳಿಗೆ ಕಾರಣವಾದ ಮೂಲವಸ್ತುಗಳು ಮಹದಾದಿ ತತ್ವಗಳು. ಅವುಗಳು ಅನಿತ್ಯಗಳು, ಅವುಗಳಿಂದ ಉತ್ಪತ್ತಿಯಾದ ಬ್ರಹ್ಮಾಂಡಾದಿಗಳೂ ಅನಿತ್ಯಗಳು. ಹೀಗೆ ಕಾರಣವಾದ ಮೂಲರೂಪದಿಂದಲೂ ಕಾರ್ಯರೂಪದಿಂದಲೂ ಉತ್ಪತ್ತಿ-ನಾಶಗಳು ಇರುವುದರಿಂದ ಬ್ರಹ್ಮಾಂಡಾದಿಗಳು ಸಂ-ಸೃಷ್ಟಗಳು. ಆದರೆ ಮಹತ್ತತ್ತ್ವವೇ ಮೊದಲಾದವುಗಳು ಸೂಕ್ಷ್ಮರೂಪದಿಂದ ಮೊದಲು ಇರುತ್ತವೆ. ಅವುಗಳಿಗೆ ಪ್ರಕೃತಿಯ ಅಣುಗಳು ಸೇರಿದಾಗ ಸ್ಥೂಲರೂಪದಿಂದ ಹುಟ್ಟುತ್ತವೆ. ಈ ಸ್ಥೂಲ ಮಹತ್ತತ್ವಾದಿಗಳಿಗೆ ಕಾರಣವಾದ ಸೂಕ್ಷ್ಮ ರೂಪ ನಿತ್ಯವಾದುದರಿಂದ, ಕಾರಣ ರೂಪದಿಂದ ನಿತ್ಯವಾಗಿದ್ದು ಕಾರ್ಯರೂಪದಿಂದ ಮಾತ್ರ ಅನಿತ್ಯವಾದುದರಿಂದ ಅವು ಅ-ಸಂಸೃಷ್ಟಗಳು.



''ಹಾಗಾದರೆ ಮಹದಾದಿ ತತ್ವಗಳು ತಮ್ಮ ಮೂಲರೂಪದಿಂದ ನಿತ್ಯವಾಗಿಯೂ, ಸ್ಥೂಲರೂಪದಿಂದ ಅನಿತ್ಯವಾಗಿಯೂ ಇರುವುದರಿಂದ ಅವು 'ನಿತ್ಯಾನಿತ್ಯ' ಎಂಬ ಹಿಂದಿನ ವಿಭಾಗದಲ್ಲೇ ಸೇರಲಿ'' ಎಂದರೆ, ಮಹದಾದಿ ತತ್ವಗಳು ಸೂಕ್ಷ್ಮಮೂಲ ರೂಪಗಳಿಗೆ 'ಮಹತ್ತತ್ತ್ವ' ಮೊದಲಾದ ಹೆಸರು ಇಲ್ಲ. ಅವುಗಳು ಪ್ರಕೃತಿಯೆಂದೇ ವ್ಯವಹರಿಸಲ್ಪಡುವುವು. ಹೀಗೆ ಪ್ರಕೃತಿರೂಪವಾದ ಅವುಗಳು ನಿತ್ಯಾನಿತ್ಯವೇ ಆದರೂ, ಅವುಗಳಿಂದ ಹುಟ್ಟಿದ ಮಹದಾದಿ ತತ್ತ್ವಗಳು ಅನಿತ್ಯವಷ್ಟೇ ಆದವು, ನಿತ್ಯಾನಿತ್ಯವಾಗಲಿಲ್ಲ.

**ಸೃಷ್ಟಿಃ ಸ್ಥಿತಿಃ ಸಂಹೃತಿಶ್ಚ ನಿಯಮೋऽಜ್ಞಾನ ಬೋಧನೇ ।**

**ಬಂಧೋ ಮೋಕ್ಷಃ ಸುಖಂ ದುಃಖಮಾವೃತಿರ್ಜ್ಯೋತಿರೇವ ಚ ॥**

**ವಿಷ್ಣುನಾऽಸ್ಯ ಸಮಸ್ತಸ್ಯ ಸಮಾಸವ್ಯಾಸಯೋಗತಃ ॥**

**॥ ಇತಿ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯ ವಿರಚಿತಂ**
**ತತ್ವಸಂಖ್ಯಾನಪ್ರಕರಣಂ ಸಂಪೂರ್ಣಮ್॥**

ಉತ್ಪತ್ತಿ ಪರಿಪಾಲನ, ಸಂಹಾರ, ಸ್ವಸ್ವವ್ಯಾಪಾರಗಳಲ್ಲಿ ಪ್ರೇರಣೆ, ಭಾವರೂಪ ಮತ್ತು ಅಭಾವರೂಪವೆನಿಸಿದ ಎರಡು ಬಗೆಯ ಅಜ್ಞಾನ, ಜ್ಞಾನ, ಬಂಧ, ಮೋಕ್ಷ, ಸುಖ, ದುಃಖ, ಕತ್ತಲು ಬೆಳಕು ಇವೆಲ್ಲ ಈ ಸಮಸ್ತ ಜಗತ್ತಿಗೂ ಯಥಾಯೋಗ್ಯವಾಗಿ ವಿಷ್ಣುವಿನಿಂದಲೇ ಉಂಟಾಗುತ್ತವೆ.

**ವಿವರಣೆ:**—ಉತ್ಪತ್ತಿ ಮೊದಲಾದ ಎಲ್ಲಾ ಧರ್ಮಗಳೂ ಎಲ್ಲಾ ತತ್ತ್ವಗಳಲ್ಲಿ ಇಲ್ಲ. ಉದಾಹರಣೆಗೆ-ನಿತ್ಯವಾದ ವೇದಕ್ಕೆ ಉತ್ಪತ್ತಿ ಇಲ್ಲ. ಅಚೇತನ ವಸ್ತುಗಳಿಗೆ ಜ್ಞಾನ ಇಲ್ಲ. ಆದ್ದರಿಂದ ಈ ಧರ್ಮಗಳು ಸಮಾಸವ್ಯಾಸಯೋಗದಿಂದ ಜಗತ್ತಿನಲ್ಲಿ ಇವೆ ಎಂದು ಆಚಾರ್ಯರು ಹೇಳುತ್ತಾರೆ. ಸಮಾಸ ಎಂದರೆ ಸಂಕ್ಷೇಪ. ವ್ಯಾಸ ಎಂದರೆ ವಿಸ್ತಾರ. ಯೋಗ ಅಂದರೆ ಉಪಾಯ. ಕೆಲವು ತತ್ತ್ವಗಳಲ್ಲಿ ಉತ್ಪತ್ತಿ ಮುಂತಾದ ಹನ್ನೆರಡು ಧರ್ಮಗಳಲ್ಲಿ ಕೆಲವನ್ನು ಮಾತ್ರ ಇಟ್ಟುಕೊಂಡು, ಇನ್ನು ಕೆಲವು ತತ್ತ್ವಗಳಲ್ಲಿ ಹೆಚ್ಚು ಧರ್ಮಗಳನ್ನೂ ಎಲ್ಲವನ್ನೂ ಇಟ್ಟುಕೊಳ್ಳಬೇಕು. ಹೀಗೆ ಈ ಉಪಾಯದಿಂದ ಯಾವ ಯಾವ ತತ್ತ್ವಗಳಲ್ಲಿ ಯಾವ ಯಾವ ಧರ್ಮಗಳು ಇರುವುವೋ ಆಯಾ ತತ್ತ್ವಗಳಲ್ಲಿ ಅವೆಲ್ಲವೂ ವಿಷ್ಣ್ವಧೀನ ಎಂದು ತಿಳಿಯಬೇಕು.

## ತತ್ವಸಂಖ್ಯಾನದಲ್ಲಿ ಪಾಠಭೇದ

ತತ್ವಸಂಖ್ಯಾನದ ಪ್ರಚಲಿತ ಪಾಠದಂತೆ ಈ ಗ್ರಂಥ ಆಚಾರ್ಯರು ರಚಿಸಿದ ಸ್ವಂತ

ಕೃತಿ. ತತ್ವವಿವೇಕ ವೇದವ್ಯಾಸರ ಕೃತಿ. ತಾನು ರಚಿಸಿದ ತತ್ವಸಂಖ್ಯಾನಕ್ಕೆ ಸಂವಾದವಾಗಿ ಆಚಾರ್ಯರು ವ್ಯಾಸರಚಿತ ತತ್ವವಿವೇಕವನ್ನು ಉದಾಹರಿಸಿದ್ದಾರೆ. ಹೀಗೆಂದು ಶ್ರೀಜಯ ತೀರ್ಥರೂ ತಿಳಿಸಿದ್ದಾರೆ. ಆದರೆ ಶ್ರೀಹೃಷಿಕೇಶತೀರ್ಥರ ಪಾಠದಂತೆ ತತ್ವಸಂಖ್ಯಾನದ 'ವಿಷ್ಣುನಾಸ್ಯ ಸಮಸ್ತಸ್ಯ ಸಮಾಸವ್ಯಾಸಯೋಗತಃ' ಎಂಬ ಶ್ಲೋಕದ ಮುಂದೆ 'ಇತಿ ತತ್ವಸಂಖ್ಯಾನೇ' ಎಂಬ ವಾಕ್ಯವಿದೆ. ಇದರಿಂದ ತತ್ವಸಂಖ್ಯಾನ ಗ್ರಂಥವು ಶ್ರೀವ್ಯಾಸ ಪ್ರಣೀತವೆನ್ನಬೇಕಾಗುತ್ತದೆ.

ಇದಲ್ಲದೆ, ಪ್ರಚಲಿತಪಾಠದಲ್ಲಿ ಈ ಗ್ರಂಥಕ್ಕೆ ಮಂಗಲಾಚರಣೆ ಇಲ್ಲ, ಪ್ರತ್ಯೇಕವಾದ ಮಂಗಲಪದ್ಯವಿಲ್ಲವೆಂದು ಶ್ರೀಜಯತೀರ್ಥರೂ ತಿಳಿಸಿದ್ದಾರೆ. ಆದರೆ ಶ್ರೀಹೃಷೀಕೇಶ ತೀರ್ಥರ ಪಾಠದಲ್ಲಿ—

ರಮಾವಿರಿಂಚಶರ್ವಾದಿ ಶಕ್ರಾದೀತರ ಸುಕ್ರಮಮ್ ।<br>
ಮುಕ್ತೌ ಚೇದಂಗುಣೈಃ ಸರ್ವೈಃ ಯುದ್ವಶೇ ನೌಮಿ ತಂ ಹರಿಮ್ ॥

ಎಂಬ ಆದ್ಯ ಮಂಗಲಪದ್ಯವೂ ಕೊನೆಯಲ್ಲಿ 'ಸ್ವಜನೋದಧಿ ಸಂವೃದ್ಧಿ' ಇತ್ಯಾದಿ ದ್ವಾದಶಸ್ತೋತ್ರದ ಒಂದು ಅಧ್ಯಾಯರೂಪವಾದ ಮಂಗಲವೂ ಕಂಡುಬರುತ್ತದೆ.

ಇಲ್ಲಿಗೆ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯರಿಂದ ರಚಿತವಾದ<br>
ತತ್ವಸಂಖ್ಯಾನ ಪ್ರಕರಣ ಮುಗಿಯಿತು.

ಶ್ರೀಆನಂದತೀರ್ಥಭಗವತ್ಪಾದಾಚಾರ್ಯವಿರಚಿತ

# ದಶಪ್ರಕರಣಗಳು

# ತತ್ವವಿವೇಕಃ

ಶ್ರೀ ಫಲಿಮಾರು ಭಂಡಾರಕೇರಿ ಮಠಾಧೀಶರಾದ
ಶ್ರೀ ವಿದ್ಯಾಮಾನ್ಯತೀರ್ಥಶ್ರೀಪಾದರ
ಅನುವಾದದ ಸಂಗ್ರಹ

# ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯವಿರಚಿತಃ

# ತತ್ವವಿವೇಕಃ

**॥ ಹರಿಃ ಓಂ ॥**

**ಸ್ವತಂತ್ರ ಪರತಂತ್ರಂ ಚ ಪ್ರಮೇಯಂ ದ್ವಿವಿಧಂ ಮತಮ್ ।**
**ಸ್ವತಂತ್ರೋ ಭಗವಾನ್ ವಿಷ್ಣುಃ ನಿರ್ದೋಷಾಖಿಲಸದ್ಗುಣಃ ॥**

ಪ್ರಮೇಯವು ಸ್ವತಂತ್ರ ಪರತಂತ್ರವೆಂದು ಎರಡು ವಿಧವಾಗಿ ಪ್ರಮಾಣಗಳಿಂದ ಸಿದ್ಧವಾಗಿದೆ. ದೋಷವಿಲ್ಲದವನೂ, ಸಮಸ್ತ ಸದ್ಗುಣಗಳಿಂದ ಪೂರ್ಣನೂ ಆದ ಭಗವಾನ್ ವಿಷ್ಣುವು ಸ್ವತಂತ್ರ ಪ್ರಮೇಯನಾಗಿರುವನು.

**ವಿವರಣೆ:—**ಆಚಾರ್ಯರು ತತ್ತ್ವಸಂಖ್ಯಾನಗ್ರಂಥದಲ್ಲಿ ಎಲ್ಲಾ ತತ್ತ್ವಗಳನ್ನೂ ವಿವೇಚಿಸಿದ್ದಾರೆ. ಆದರೆ ಅಲ್ಲಿ ಹೇಳಿದ ವಿಷಯಗಳಿಗೆ ಈ ಗ್ರಂಥದಲ್ಲಿ ಪ್ರಮಾಣಗಳನ್ನು ಉದಾಹರಿಸುತ್ತಾರೆ. ಈ ಪ್ರಮಾಣಗಳು ಭಗವದ್ರಚಿತವಾದ ತತ್ತ್ವವಿವೇಕ ಎಂಬ ಗ್ರಂಥದಲ್ಲಿ ಇದ್ದವುಗಳೇ ಆಗಿವೆ.

ತತ್ತ್ವಸಂಖ್ಯಾನದಲ್ಲಿ 'ದ್ವಿವಿಧಂತತ್ತ್ವಂ' ಎಂದು ಹೇಳಿದ್ದಾರೆ. ತತ್ತ್ವ ಎಂದರೆ ಅನಾರೋಪಿತವಸ್ತು. ಹಗ್ಗದಲ್ಲಿ ಹಾವನ್ನು ಕಾಣುವುದು ಎಂದರೆ ಹಗ್ಗದಲ್ಲಿ ಹಾವನ್ನು ಆರೋಪ ಮಾಡುವುದು. ಅದು ಆರೋಪಿತವಾದುದರಿಂದ ತತ್ತ್ವ ಅಲ್ಲ. ನೀರನ್ನು ನೋಡಿದಾಗ ಇದು ನೀರು ಎಂದು ಜ್ಞಾನ ಬಂದಾಗ ಆ ನೀರು ಆರೋಪಿತವಲ್ಲ, ಅನಾರೋಪಿತ. ಆದ್ದರಿಂದ ತತ್ತ್ವ. ಹೀಗೆ ಅನಾರೋಪಿತತ್ವ, ಎಂಬುದು ಎಲ್ಲಾ ತತ್ತ್ವಗಳಲ್ಲಿಯೂ ಇರುವ ಲಕ್ಷಣ. ತತ್ತ್ವವಿವೇಕದಲ್ಲಿ 'ಪ್ರಮೇಯಂ ದ್ವಿವಿಧಂ' ಎಂದು ಹೇಳಿ 'ಪ್ರಮೇಯತ್ವವು' ತತ್ತ್ವಗಳ ಲಕ್ಷಣ ಎಂದು ಹೇಳಿದ್ದಾರೆ. ಪ್ರಮಾ ಎಂದರೆ ಸರಿಯಾದ ಜ್ಞಾನ. ಯಾವ ವಸ್ತುವಿನ ಸರಿಯಾದ ಜ್ಞಾನ ನಮಗಾಗಿದೆಯೋ ಆ ವಸ್ತು ಪ್ರಮೇಯ ಎನಿಸುತ್ತದೆ. ಆದ್ದರಿಂದ ಪ್ರಮೇಯತ್ವ ಎಲ್ಲಾ ತತ್ತ್ವಗಳಲ್ಲೂ ಇದೆ. ಅದು ತತ್ತ್ವಗಳ ಸಾಮಾನ್ಯ ಲಕ್ಷಣ.

ಸ್ವ=ತನಗೆ ತಾನೇ, ತಂತ್ರ=ಪ್ರಭು. ಇನ್ನೊಬ್ಬರು ತನಗೆ ಪ್ರಭುಗಳು ಇಲ್ಲ ಎಂಬ ಅರ್ಥದಲ್ಲಿ ಶ್ರೀವಿಷ್ಣು ಸ್ವತಂತ್ರ. ಪರ=ತನಗಿಂತ ಬೇರೆಯಾದವರಿಗೆ, ತಂತ್ರ=ತಮ್ಮ ಮೇಲೆ ಪ್ರಭುತ್ವವಿದೆ ಎಂಬ ಅರ್ಥದಲ್ಲಿ, ರಮಾಬ್ರಹ್ಮಾದಿಗಳು ಪರತಂತ್ರರು, ಯಾರು ಪರತಂತ್ರರೋ ಅವರು ಯಾವ ದೋಷವಿಲ್ಲದವರೂ, ಸರ್ವಗುಣ ಸಂಪನ್ನರೂ



ಆಗಿರುವುದಿಲ್ಲ. ಭಗವಂತನಲ್ಲಿ ಸರ್ವಗುಣಗಳೂ ಇವೆ. ಯಾವ ದೋಷವೂ ಇಲ್ಲ. ಆದ್ದರಿಂದ ಅವನು ಸ್ವತಂತ್ರ. ಹೀಗೆ ಭಗವಂತನಲ್ಲಿ ಸ್ವಾತಂತ್ರ್ಯವನ್ನು ಯುಕ್ತಿಯಿಂದ ಸಮರ್ಥಿಸಲು ಅವನಿಗೆ, ನಿರ್ದೋಷಾಖಿಲಸದ್ಗುಣ ಎಂಬ ವಿಶೇಷಣ ಕೊಡಲಾಗಿದೆ.

ಕುರುಡನೂ ನೋಡಲು ಅಸ್ವತಂತ್ರ, ಕಾಲಿಲ್ಲದವನೂ ನಡೆಯಲು ಅಸ್ವತಂತ್ರ. ಆದರೆ ಇಬ್ಬರೂ ಒಟ್ಟಿಗೆ ಸೇರಿದಾಗ ಕಾಲಿಲ್ಲದವನನ್ನು ಕುರುಡನು ಹೊತ್ತು ಅವನು ಹೇಳಿದ ದಾರಿಯಲ್ಲಿ ನಡೆಯಬಹುದು. ಇಲ್ಲಿ ಕಾಲಿಲ್ಲದವನ ಪ್ರಯಾಣವು ಕುರುಡನಿಂದಲೂ, ಕುರುಡನ ಪ್ರಯಾಣವು ಕಾಲಿಲ್ಲದವನಿಂದಲೂ ಆಗುವಂತೆ, ಒಬ್ಬ ಅಸ್ವತಂತ್ರ ಜೀವನು ಇನ್ನೊಬ್ಬ ಅಸ್ವತಂತ್ರ ಜೀವನ ಸಹಾಯದಿಂದ ಎಲ್ಲಾ ಪ್ರವೃತ್ತಿಯನ್ನು ಮಾಡಬಹುದಲ್ಲ? ಸ್ವತಂತ್ರ ಪರಮಾತ್ಮತತ್ತ್ವ ಏಕೆ ಬೇಕು? ಈ ಪ್ರಶ್ನೆಗೆ ಸಮಾಧಾನ ಹೀಗೆ- ಕುರುಡನೂ ಕುಂಟನೂ ಜೊತೆಗೆ ಸೇರಿದರೆ ಪರಸ್ಪರ ಸಹಾಯದಿಂದ ಪ್ರವೃತ್ತಿಯು ನಡೆಯಬಹುದು. ಆದರೆ ಅವರಿಬ್ಬರು ಜೊತೆಯಾಗುವುದು ಹೇಗೆ? ಸ್ವತಂತ್ರನಾದ ಇನ್ನೊಬ್ಬನ ಸಹಾಯವಿಲ್ಲದೆ ಅವರಿಬ್ಬರು ಜೊತೆಯಾಗಲಾರರು. ಅದರಂತೆ ಅಸ್ವತಂತ್ರ ಜೀವರಿಬ್ಬರು ಸೇರಿಸಬೇಕಾದರೂ ಸ್ವತಂತ್ರ ಪರಮಾತ್ಮನ ಪ್ರೇರಣೆ ಬೇಕೇಬೇಕು. ಆದ್ದರಿಂದ ಸ್ವತಂತ್ರತತ್ತ್ವವನ್ನು ಒಪ್ಪಲೇಬೇಕು.

**ದ್ವಿವಿಧಂ ಪರತಂತ್ರಂ ಚ ಭಾವೋಽಭಾವ ಇತೀರಿತಃ ।**
**ಪೂರ್ವಾಪರಸದಾತ್ವೇನ ತ್ರಿವಿಧೋಽಭಾವ ಇಷ್ಯತೇ ॥**

**ಭಾವವೆಂದೂ, ಅಭಾವವೆಂದೂ ಪರತಂತ್ರಪ್ರಮೇಯವು ಎರಡು ವಿಧವಾಗಿದೆ. ಪೂರ್ವಾಭಾವ, ಅಪರಾಭಾವ ಮತ್ತು ಸದಾಭಾವ ಎಂದು ಅಭಾವವು ಮೂರು ವಿಧವಾಗಿದೆ.**

**ವಿವರಣೆ:—**ವಸ್ತುವು ಹುಟ್ಟುವ ಮೊದಲು ಇರುವ ಅದರ ಅಭಾವ ಪೂರ್ವಾಭಾವ. ಇದನ್ನು ಪ್ರಾಗಾಭಾವವೆಂದೂ ಹೇಳುವರು. ವಸ್ತುವು ನಾಶವಾದ ಮೇಲೆ ಇರುವ ಅದರ ಅಭಾವ ಅಪರಾಭಾವ. ಪ್ರಧ್ವಂಸಾಭಾವ ಎಂದು ಇದರ ಮತ್ತೊಂದು ಹೆಸರು. ಯಾವ ಅಭಾವವು ಯಾವಾಗಲೂ ಇರುವುದೋ ಅದು ಸದಾಭಾವ. ಇದನ್ನು ಅತ್ಯಂತಾಭಾವ ಎನ್ನುವರು.

'ಮೊಲದ ಕೋಡು ಇಲ್ಲ' ಎನ್ನುವ ಅಭಾವ ಅತ್ಯಂತಾಭಾವ. ಯಾವುದನ್ನು ಇಲ್ಲ ಎನ್ನುತ್ತೇವೆಯೋ ಅದು ಪ್ರತಿಯೋಗಿ ಎನಿಸುತ್ತದೆ. ಆದ್ದರಿಂದ ಈ ಅಭಾವಕ್ಕೆ ಮೊಲದ ಕೋಡು ಪ್ರತಿಯೋಗಿ. ಕೆಲವು ಸಿದ್ಧಾಂತಿಗಳು ಇದನ್ನು ಒಪ್ಪುವುದಿಲ್ಲ. 'ಮೊಲದ ಕೋಡು ಎಲ್ಲೂ ಇಲ್ಲವೆಂದಾದ ಮೇಲೆ ಅದನ್ನು ಪ್ರತಿಯೋಗಿ ಎನ್ನುವುದು ಹೇಗೆ? ಪ್ರತಿಯೋಗಿಯಾದರೆ ಅದರಲ್ಲಿ ಪ್ರತಿಯೋಗಿತ್ವ ಎಂಬ ಧರ್ಮವು ಇರಬೇಕು. ವಸ್ತುವೇ

ಇಲ್ಲದಾದಾಗ ಅದರಲ್ಲಿ ಪ್ರತಿಯೋಗಿತ್ವ ಎಂಬ ಧರ್ಮ ಇರುವುದು ಹೇಗೆ? ಆದ್ದರಿಂದ ಅತ್ಯಂತ ಅಸತ್ಯವಾದ ವಸ್ತುವು ಅಭಾವಕ್ಕೆ ಪ್ರತಿಯೋಗಿಯಾಗಲಾರದು' ಎಂದು ಅವರ ವಾದ. ಆದರೆ ಬಟ್ಟೆಯು ಹುಟ್ಟುವ ಮೊದಲು ಅದರ ಪ್ರಾಗಭಾವ ಇದೆ. ಆ ಪ್ರಾಗಭಾವಕ್ಕೆ ಪ್ರತಿಯೋಗಿ ಬಟ್ಟೆ. ಆದರೆ ಅಭಾವ ಇರುವಾಗ ಆ ಬಟ್ಟೆ ಇಲ್ಲ. ಆದ್ದರಿಂದ ಪ್ರಾಗಭಾವಕ್ಕಾದರೂ ಬಟ್ಟೆಯು ಪ್ರತಿಯೋಗಿಯಾಗುವುದು ಹೇಗೆ? ಹೀಗೆ ಇಲ್ಲದಿರುವ ವಸ್ತುವೂ ಅಭಾವಕ್ಕೆ ಪ್ರತಿಯೋಗಿಯಾಗುತ್ತದೆ ಎಂದು ಎಲ್ಲರೂ ಹೇಳಲೇಬೇಕಾಗುವುದು. ರೂಪವು ಇರಬೇಕಾದರೆ ಅದಕ್ಕೆ ಆಶ್ರಯವಾದ ವಸ್ತುವೂ ಇರಬೇಕು. ಆದರೆ ಪ್ರತಿಯೋಗಿತ್ವವು ಇರಬೇಕಾದರೆ ಪ್ರತಿಯೋಗಿಯು ಇರಬೇಕಾಗಿಲ್ಲ. ಆದ್ದರಿಂದ ರೂಪ ಮೊದಲಾದ ಕೆಲವು ಧರ್ಮಗಳು ಧರ್ಮಿಸತ್ತಾಸಾಪೇಕ್ಷಗಳಾಗಿವೆ. ಪ್ರತಿಯೋಗಿತ್ವ ಮೊದಲಾದ ಕೆಲವು ಧರ್ಮಗಳು ಧರ್ಮಿಸತ್ತಾನಿರಪೇಕ್ಷಗಳಾಗಿವೆ.

**ಭಾವಾಭಾವಸ್ವರೂಪತ್ವಾತ್ ನಾನ್ಯೋನ್ಯಾಭಾವತಾ ಪೃಥಕ್ ।**

ಭಾವವಸ್ತುವಿನಲ್ಲಿರುವ ಅನ್ಯೋನ್ಯಾಭಾವವು ಭಾವಸ್ವರೂಪ. ಪ್ರಾಗಭಾವಾದಿ ಅಭಾವವಸ್ತುವಿನಲ್ಲಿರುವ ಅನ್ಯೋನ್ಯಾಭಾವವು ಪ್ರಾಗಭಾವಾದಿ ಅಭಾವ ಸ್ವರೂಪ. ಆದ್ದರಿಂದ ಭಾವವಸ್ತುಗಿಗಿಂತಲೂ, ಪ್ರಾಗಭಾವಾದಿ ಅಭಾವ ವಸ್ತುಗಳಿಗಿಂತಲೂ ಬೇರೆಯಾದ ಅನ್ಯೋನ್ಯಾಭಾವವೆಂಬ ಇನ್ನೊಂದು ಅಭಾವವು ಇಲ್ಲ.

**ವಿವರಣೆ:—**ಹಿಂದೆ ಹೇಳಿದ ಮೂರು ಅಭಾವಗಳಲ್ಲದೆ ಅನ್ಯೋನ್ಯಾಭಾವ ಎಂಬ ಇನ್ನೊಂದು ಅಭಾವವನ್ನು ಕೆಲವರು ಹೇಳುತ್ತಾರೆ. ಅನ್ಯೋನ್ಯಾಭಾವ ಎಂದರೆ ಭೇದ. ಆಯಾಯ ವಸ್ತುವಿನಲ್ಲಿರುವ ಭೇದವು ಆ ವಸ್ತುವಿನ ಸ್ವರೂಪವೇ ಆಗಿದೆ. ಅದು ಆ ವಸ್ತುವಿಗಿಂತ ಪ್ರತ್ಯೇಕವಾದ ಒಂದು ವಸ್ತುವೇ ಅಲ್ಲ. ಆದ್ದರಿಂದ ಅಭಾವಗಳು ಮೂರೇ.

**ಚೇತನೋಽಚೇತನಶ್ಚೇತಿ ಭಾವಶ್ಚ ದ್ವಿವಿಧಃ ಸ್ಮೃತಃ ।**
**ನಿತ್ಯಮುಕ್ತಶ್ಚ ಸೃತಿಯುಕ್ ಪರತಂತ್ರೋಽಪಿ ಚೇತನಃ ॥**
**ದ್ವಿಧೈವ, ಶ್ರೀರ್ನಿತ್ಯಮುಕ್ತಾ, ಸೃತಿಯುಕ್ ಚ ದ್ವಿಧಾ ಮತಃ ।**
**ಮುಕ್ತೋಽಮುಕ್ತ ಇತಿ, ಹ್ಯತ್ರ ಬ್ರಹ್ಮಾಂತಾ ಉತ್ತರೋತ್ತರಮ್ ।**
**ಮುಕ್ತಾಃ ಶತಗುಣಾಃ ಪ್ರೋಕ್ತಾಃ, ರಮಾ ತೇಭ್ಯೋಽಖಿಲೈರ್ಗುಣೈಃ ।**
**ನಿತ್ಯಂ ಬಹುಗುಣೋದ್ರಿಕ್ತಾ, ತತೋಽನಂತಗುಣೋ ಹರಿಃ ॥**

ಭಾವವಸ್ತುವು ಚೇತನ ಮತ್ತು ಅಚೇತನ ಎಂದು ಎರಡು ವಿಧವಾಗಿದೆ.



ಪರತಂತ್ರವಾಗಿದ್ದರೂ ಚೇತನ ವಸ್ತುವು ನಿತ್ಯಮುಕ್ತ ಎಂದೂ ಸಂಸಾರ ಸಂಬಂಧವುಳ್ಳದ್ದು ಎಂದೂ ಎರಡು ವಿಧವಾಗಿದೆ. ಲಕ್ಷ್ಮೀದೇವಿಯು ನಿತ್ಯಮುಕ್ತ ಚೇತನಳು. ಸಂಸಾರ ಸಂಬಂಧವುಳ್ಳ ಚೇತನರು ಮುಕ್ತರು ಮತ್ತು ಅಮುಕ್ತರು ಎಂದು ಎರಡು ವಿಧವಾಗಿದ್ದಾರೆ. ಮುಕ್ತರು ಮನುಷ್ಯರನ್ನು ಮೊದಲುಗೊಂಡು ಚತುರ್ಮುಖನ ವರೆಗೆ ಆನಂದಾದಿ ಗುಣಗಳಲ್ಲಿ ಒಬ್ಬರಿಗೊಬ್ಬರು ನೂರುಪಟ್ಟು ಆಧಿಕ್ಯವನ್ನು ಹೊಂದಿದವರಾಗಿದ್ದಾರೆ. ಲಕ್ಷ್ಮೀದೇವಿಯು ಬ್ರಹ್ಮಾದಿಗಳಿಗಿಂತ ಎಲ್ಲ ಗುಣಗಳಲ್ಲಿಯೂ ಯಾವಾಗಲೂ ಹೆಚ್ಚುಪಾಲು ಅಧಿಕಳಾಗಿರುವಳು. ಶ್ರೀಹರಿಯು ಅವಳಿಗಿಂತಲೂ ಅನಂತಪಟ್ಟು ಅಧಿಕ ಗುಣವುಳ್ಳವನಾಗಿರುವನು.

**ವಿವರಣೆ:—**ಎಂದೂ ಸಂಸಾರದ ಸಂಬಂಧವೇ ಇಲ್ಲದ ಚೇತನವೇ ನಿತ್ಯಮುಕ್ತ ಎನಿಸುತ್ತದೆ. ಎಂದಾದರೊಮ್ಮೆ ಸಂಸಾರ ಸಂಬಂಧವಿರುವ ಚೇತನ ''ಸೃತಿಯುಕ್'' ಹಿಂದಿನ ಬ್ರಹ್ಮಾದಿಗಳು ಇಂದು ಮುಕ್ತರಾಗಿದ್ದರೂ, ಹಿಂದೆ ಅವರಿಗೆ ಸಂಸಾರ ಸಂಬಂಧ ಇದ್ದುದರಿಂದ ಅವರನ್ನು ಸೃತಿಯುಕ್ ಎಂಬ ಗುಂಪಿನಲ್ಲೇ ಸೇರಿಸಲಾಗಿದೆ.

ಲಕ್ಷ್ಮೀದೇವಿಯು ನಿತ್ಯಮುಕ್ತಳು. ಸಂಸಾರದ ಸಂಬಂಧವೆಂದೂ ಅವಳಿಗಿಲ್ಲ. ಹಾಗಾದರೆ ಅವಳು ಪರತಂತ್ರಳಾಗುವುದು ಹೇಗೆ? ಪರಮಾತ್ಮನಂತೆ ಅವಳೂ ಸ್ವತಂತ್ರಳೇ ಆಗಬೇಕಲ್ಲವೇ? ಈ ಪ್ರಶ್ನೆಯ ಪರಿಹಾರಕ್ಕಾಗಿ ಪರತಂತ್ರೋಽಪಿ ಎಂದು ಹೇಳಿದೆ. ಲಕ್ಷ್ಮೀದೇವಿ ನಿತ್ಯಮುಕ್ತಳು ಹಾಗೂ ಪರತಂತ್ರಳು ಎಂದು ಪ್ರಮಾಣವಿರುವುದರಿಂದ ಅದನ್ನು ಒಪ್ಪಲೇಬೇಕು ಎಂದು ಅಭಿಪ್ರಾಯ.

'ಬ್ರಹ್ಮಾದಿಗಳು ಸಂಸಾರದಲ್ಲಿದ್ದಾಗ ಲಕ್ಷ್ಮೀದೇವಿಗಿಂತ ಆನಂದಾದಿಗಳಲ್ಲಿ ಕಡಿಮೆಯವರಾದರೂ ಮುಕ್ತರಾದ ಮೇಲೆ ಲಕ್ಷ್ಮೀದೇವಿಯ ಸಾಮ್ಯವನ್ನು ಪಡೆಯುತ್ತಾರೆ' ಎಂಬ ಆಕ್ಷೇಪ ಪರಿಹಾರಕ್ಕಾಗಿ ಬ್ರಹ್ಮಾದಿಗಳೆಲ್ಲರಿಗಿಂತ ರಮೆಗೆ ಯಾವಾಗಲೂ ಅಂದರೆ ಮುಕ್ತಿಯಲ್ಲಿಯೂ ಅಧಿಕ್ಯವನ್ನು ಹೇಳಲಾಗಿದೆ. ಸ್ವಾತಂತ್ರ್ಯವೇ ಮುಕ್ತಿ ಎಂದು ಹೇಳುವ ಕೆಲವರ ಮತದಲ್ಲಿ ಮುಕ್ತರಾದ ಮೇಲೆ ಎಲ್ಲರೂ ವಿಷ್ಣುವಿಗೆ ಸಮಾನರು ಎಂಬ ಆಕ್ಷೇಪ ನಿರಾಕರಣೆಗಾಗಿ ವಿಷ್ಣುವು ಲಕ್ಷ್ಮಿಗಿಂತಲೂ ಅನಂತಪಟ್ಟು ಉತ್ತಮ ಎಂದು ಹೇಳಲಾಗಿದೆ. ಸ್ವಾತಂತ್ರ್ಯವು ಮುಕ್ತಿಯಲ್ಲ. ಸ್ವರೂಪಾನಂದಾವಿರ್ಭಾವವೇ ಮುಕ್ತಿ ಎಂದು ಅಭಿಪ್ರಾಯ.

**ಅಮುಕ್ತಾಸ್ತ್ರಿಧಾಸ್ತತ್ರ ನೀಚಮಧ್ಯೋಚ್ಚಭೇದತಃ ।**
**ಮುಕ್ತಿಯೋಗ್ಯಾಸ್ತತ್ರ ಚೋಚ್ಚಾಃ ನಿತ್ಯಾವರ್ತಾಸ್ತು ಮಧ್ಯಮಾಃ ॥**
**ನೀಚಾ ನಿತ್ಯತಮೋಯೋಗ್ಯಾಃ..............।**

ಅಮುಕ್ತರು - ನೀಚರು, ಮಧ್ಯಮರು ಮತ್ತು ಉತ್ತಮರು ಎಂದು ಮೂರು ವಿಧವಾಗಿದ್ದಾರೆ. ಮುಕ್ತಿಯೋಗ್ಯರು ಉತ್ತಮರು. ನಿತ್ಯ ಸಂಸಾರಿಗಳು

ಮಧ್ಯಮರು, ಪುನರಾಗಮನವಿಲ್ಲದ ಅಂಧಂತಮಸ್ಸಿಗೆ ಅರ್ಹರಾದವರು ನೀಚರು.

**ವಿವರಣೆ:—**ಮುಕ್ತಿಗೆ ಬೇಕಾದ ಸಾಧನೆಯನ್ನು ಮಾಡುವವರೆಲ್ಲರೂ ಮುಕ್ತರಾಗುತ್ತಾರೆ ಎಂಬ ಅಭಿಪ್ರಾಯವನ್ನು ನಿರಾಕರಿಸಲು ನಿತ್ಯಾವರ್ತಾಸ್ತು ಎಂಬಲ್ಲಿ 'ತು' ಶಬ್ದವಿದೆ. ಅದನ್ನು 'ಉಚ್ಚಾಃ' ಎಂಬ ಶಬ್ದದೊಂದಿಗೆ ಸೇರಿಸಿಕೊಂಡರೆ 'ಉಚ್ಚರಾದವರು ಮಾತ್ರ ಮುಕ್ತಿಯೋಗ್ಯರು' ಎಂದು ಅರ್ಥವಾಗುತ್ತದೆ. ಇದರಿಂದ ನೀಚರೂ ಮಧ್ಯಮರೂ ಸಾಧನಾನುಷ್ಠಾನ ಮಾಡಿ ಮೋಕ್ಷಪಡೆಯಬಲ್ಲರು ಎಂಬ ಅಭಿಪ್ರಾಯವನ್ನು ನಿಷೇಧ ಮಾಡಿದಂತಾಯಿತು.

ಮೋಕ್ಷದಲ್ಲಿ ಅನುಭವಕ್ಕೆ ಬರುವ ಆನಂದವು ಜೀವರ ಸ್ವರೂಪಭೂತವೇ ಆಗಿರುತ್ತದೆ. ಸಂಸಾರದಲ್ಲಿ ಅದು ಅವಿದ್ಯೆಯಿಂದ ಆವೃತವಾಗಿ ಅನುಭವಕ್ಕೆ ಬರುವುದಿಲ್ಲ. ಅವಿದ್ಯೆಯು ನಿವೃತ್ತವಾದಾಗ ಆ ಆನಂದವು ಅನುಭವಕ್ಕೆ ಬರುವುದು. ಇದನ್ನೇ ಸ್ವರೂಪಾವಿರ್ಭಾವ ಎನ್ನುವರು. ಇದೇ ಮೋಕ್ಷ. ಹೀಗೆ ಸ್ವರೂಪದ ವಿಷಯದಲ್ಲಿ ಮುಕ್ತರಿಗೂ ಮುಕ್ತಿಯೋಗ್ಯರಿಗೂ ಯಾವ ವ್ಯತ್ಯಾಸವೂ ಇಲ್ಲ. ಆದ್ದರಿಂದ ಮುಕ್ತರಲ್ಲಿ ಹೇಳಿದ 'ಬ್ರಹ್ಮಾಂತಾ ಉತ್ತರೋತ್ತರಂ' ಎಂಬ ತಾರತಮ್ಯವನ್ನು ಮುಕ್ತಿಯೋಗ್ಯರಲ್ಲೂ ತಿಳಿಯಬೇಕು. ಆದ್ದರಿಂದಲೇ ತತ್ತ್ವಸಂಖ್ಯಾನದಲ್ಲಿ ಮುಕ್ತರಲ್ಲಿ ಹೇಳಿದ 'ದೇವರ್ಷಿ ಪಿತೃ ಪ ನರಾಃ' ಎಂಬ ಪ್ರಭೇದವನ್ನು ಆಚಾರ್ಯರು ಮುಕ್ತಿಯೋಗ್ಯರಲ್ಲೂ ತಿಳಿಯಬೇಕೆಂದು ಹೇಳಿದ್ದಾರೆ.

**.............. ದ್ವಿಧೈವಾಚೇತನಂ ಮತಮ್ ।**
**ನಿತ್ಯಾನಿತ್ಯತ್ವಭೇದೇನ, ದೇಶಃ ಕಾಲಃ ಶ್ರುತಿಸ್ತಥಾ ।**
**ಭೂತೇಂದ್ರಿಯ ಪ್ರಾಣ ಗುಣ ಸೂಕ್ಷ್ಮರೂಪಂ ಚ ನಿತ್ಯಕಮ್ ।**
**ಏಷಾಂ ವಿಕಾರೋಽನಿತ್ಯಃ ಸ್ಯಾತ್, ನಿತ್ಯಾ ಏವ ಹಿ ಚೇತನಾಃ ॥**

ಅಚೇತನವು ನಿತ್ಯ ಹಾಗೂ ಅನಿತ್ಯ ಎಂದು ಎರಡು ವಿಧವಾಗಿದೆ. ಅವ್ಯಾಕೃತಾಕಾಶ, ಕಾಲಪ್ರವಾಹ ಮತ್ತು ವೇದಗಳು, ಪೃಥಿವಿಯೇ ಮೊದಲಾದ ಪಂಚ ಭೂತಗಳು, ಹನ್ನೊಂದು ಇಂದ್ರಿಯಗಳು, ಪ್ರಾಣಕಲಾ, ಸತ್ತ್ವರಜಸ್ತಮೋಗುಣಗಳು, ರೂಪ-ರಸ-ಗಂಧ-ಸ್ಪರ್ಶ-ಶಬ್ದಗಳೆಂಬ ಐದು ತನ್ಮಾತ್ರೆಗಳು, ಮಹತ್ತತ್ವ, ಅಹಂಕಾರತತ್ವ, ಬುದ್ಧಿತತ್ವ ಇವೆಲ್ಲವುಗಳ ಸೂಕ್ಷ್ಮರೂಪಗಳೂ ನಿತ್ಯವಾದ ಅಚೇತನ ವಸ್ತುಗಳು, ಈ ನಿತ್ಯವಸ್ತುಗಳಿಂದ ವಿಕಾರಹೊಂದಿ ಉತ್ಪನ್ನವಾಗುವ ವಸ್ತುಗಳು ಅನಿತ್ಯಗಳು. ಚೇತನವಸ್ತುಗಳು ಎಲ್ಲವೂ ನಿತ್ಯವೇ ಆಗಿವೆ.



**ವಿವರಣೆ:—**ಆಕಾಶವು ಎರಡು ವಿಧವಾಗಿದೆ- ವಿಕಾರ ಹೊಂದುವ ಆಕಾಶ ಒಂದು, ವಿಕಾರವಿಲ್ಲದ ಆಕಾಶವೊಂದು. ಮೊದಲನೆಯದು ಪಂಚಭೂತಗಳಲ್ಲಿ ಒಂದಾಗಿದ್ದು ಭೂತಾಕಾಶವೆನಿಸುತ್ತದೆ. ಎರಡನೆಯದು ಅವ್ಯಾಕೃತಾಕಾಶ. ಇದನ್ನೇ 'ದೇಶ' ಎಂದು ಇಲ್ಲಿ ಹೆಸರಿಸಲಾಗಿದೆ. ಇದರಂತೆ ಕ್ಷಣದಿನಾದಿಗಳು ಹುಟ್ಟಿ ನಾಶವಾಗುವ ಕಾಲಗಳು. ಇವು ಮಹಾಕಾಲದ ಅಂಶಗಳು. ಈ ಅಂಶಗಳಿಂದ ಕೂಡಿದ ಕಾಲದ ಪ್ರವಾಹ ನಿರಂತರವಾಗಿರುತ್ತದೆ. ಅದು ನಿತ್ಯ.

ಐದು ಜ್ಞಾನೇಂದ್ರಿಯಗಳು, ಐದು ಕರ್ಮೇಂದ್ರಿಯಗಳು ಮತ್ತು ಮನಸ್ಸು ಒಟ್ಟು ಹನ್ನೊಂದು ಇಂದ್ರಿಯಗಳು. ಪಂಚಭೂತಗಳು, ಇವೆಲ್ಲವುಗಳ ಸೂಕ್ಷ್ಮವಾದ ಮೂಲರೂಪದ ನಿತ್ಯವಾಗಿದೆ. ಅವು ಸೃಷ್ಟಿಕಾಲದಲ್ಲಿ ಅಹಂಕಾರತತ್ತ್ವ ಮತ್ತು ಭೂತಸೂಕ್ಷ್ಮಗಳ ಅಣುಗಳಿಂದ ಉಪಚಯ ಹೊಂದುತ್ತವೆ.

ಜೀವಶರೀರದ ಹದಿನಾರು ಕಲೆಗಳಲ್ಲಿ 'ಪ್ರಾಣ' ಒಂದು ಕಲೆ. ಇದು ಅಹಂಕಾರದ ತತ್ತ್ವದಿಂದ ಉಂಟಾಗುತ್ತದೆ. ಸೂಕ್ಷ್ಮರೂಪದಲ್ಲಿ ಇದು ನಿತ್ಯ.

ಸತ್ತ್ವಾದಿಗುಣಗಳಿಗೂ, ರೂಪಾದಿಗುಣಗಳಿಗೂ ಮೂಲಸೂಕ್ಷ್ಮರೂಪಗಳಿವೆ. ಅವುಗಳು ನಿತ್ಯ.

ಸೂಕ್ಷ್ಮವಾದ ಈ ನಿತ್ಯ ವಸ್ತುಗಳಿಂದ ಸ್ಥೂಲರೂಪದಲ್ಲಿ ಸೃಷ್ಟಿಹೊಂದುವ ವಿಕಾರ ವಸ್ತುಗಳು ಅನಿತ್ಯ.

ಕಾಲದ ವಿಕಾರ ದಿನ-ಕ್ಷಣಾದಿಗಳು. ಅವು ಕಾಲಪ್ರವಾಹದ ಅವಯವಗಳಾದುದರಿಂದ ಕಾಲದ ವಿಕಾರಗಳೆನಿಸಿವೆ. ಮಹತ್ತತ್ತ್ವ, ಅಹಂಕಾರತತ್ತ್ವ ಮೊದಲಾದುವು ಸೃಷ್ಟಿಕಾಲದಲ್ಲಿ ಪ್ರಕೃತಿಭಾಗಗಳಿಂದ ಉಪಚಯಗೊಳ್ಳುತ್ತವೆ. ಆದ್ದರಿಂದ ಅವು ಅನಿತ್ಯಗಳು. ಬ್ರಹ್ಮಾಂಡ ಮತ್ತು ಅದರೊಳಗಿನ ವಸ್ತುಗಳೆಲ್ಲವೂ, ಮಣ್ಣಿನಿಂದ ಮಡಿಕೆಯಂತೆ, ಮಹತ್ತತ್ತ್ವಾದಿಗಳಿಂದ ವಿಕಾರಗೊಳ್ಳುತ್ತವೆ. ಆದ್ದರಿಂದ ಅವು ಅನಿತ್ಯಗಳು.

ಆಚಾರ್ಯರು ತತ್ತ್ವಸಂಖ್ಯಾನದಲ್ಲಿ ಅಚೇತನವಸ್ತುಗಳನ್ನು ನಿತ್ಯ, ಅನಿತ್ಯ, ನಿತ್ಯಾನಿತ್ಯ ಎಂದು ಮೂರು ವಿಧವಾಗಿ ವಿಂಗಡಿಸಿದ್ದಾರೆ. ಆದರೆ ಅವು ತತ್ತ್ವವಿವೇಕದಲ್ಲಿ ನಿತ್ಯ ಅನಿತ್ಯವೆಂದು ಎರಡೇ ವಿಧವಾಗಿ ಪರಿಗಣಿಸಲ್ಪಟ್ಟಿವೆ. ಇವೆರಡನ್ನೂ ಹೊಂದಿಸುವುದು ಹೇಗೆ?

ತತ್ತ್ವಸಂಖ್ಯಾನದಲ್ಲಿ ಪುರಾಣ-ಕಾಲ-ಪ್ರಕೃತಿಗಳನ್ನು ನಿತ್ಯಾನಿತ್ಯವೆಂದು ಪರಿಗಣಿಸಲಾಗಿದೆ. ಪುರಾಣಗಳೆಂದರೆ ಕ್ರಮದಿಂದ ಕೂಡಿದ ವರ್ಣಗಳ ಸಮೂಹ. ಇಲ್ಲಿ ವರ್ಣಗಳು ಅಂಶ. ಪುರಾಣವು ಅಂಶಿ ಎನಿಸುತ್ತದೆ. ಇದರಂತೆ ದಿನಕ್ಷಣಗಳ ಪ್ರವಾಹವೇ ಕಾಲ. ಇಲ್ಲಿ ದಿನಕ್ಷಣಾದಿಗಳು ಪ್ರವಾಹಿ. ಕಾಲವು ಪ್ರವಾಹ. ಹೀಗೆಯೇ, ಪ್ರಕೃತಿಯ ವಿಕಾರವಾಗಿವೆ

ಮಹತ್ತತ್ತ್ವಾದಿಗಳು. ಇಲ್ಲಿ ಪ್ರಕೃತಿ ವಿಕಾರಿ, ಮಹತ್ತತ್ತ್ವಾದಿಗಳು ವಿಕಾರಗಳು. ಅಂಶ-ಅಂಶಿ, ಪ್ರವಾಹ-ಪ್ರವಾಹಿ, ವಿಕಾರ-ವಿಕಾರಿಗಳಿಗೆ ಅಭೇದವೂ ಇದೆ, ಬೇಧವೂ ಇದೆ. ಅವೆರಡಕ್ಕೂ ಅಭೇದವೆಂದು ಪರಿಗಣಿಸಿದರೆ ಪುರಾಣ, ಕಾಲ, ಪ್ರಕೃತಿಗಳು ಒಂದು ರೂಪದಿಂದ ನಿತ್ಯ ಮತ್ತೊಂದು ರೂಪದಿಂದ ಅನಿತ್ಯಗಳಾಗುತ್ತವೆ. ಆದ್ದರಿಂದ ಅವುಗಳನ್ನು ತತ್ತ್ವಸಂಖ್ಯಾನದಲ್ಲಿ ನಿತ್ಯಾನಿತ್ಯಗಳೆಂದು ಪರಿಗಣಿಸಲಾಗಿದೆ. ಅವೆರಡಕ್ಕೆ ಭೇದವೂ ಇರುವುದರಿಂದ ಕಾಲವು ನಿತ್ಯ, ದಿನಾದಿ ಪ್ರವಾಹಿಗಳು ಅನಿತ್ಯ. ವರ್ಣಗಳು ನಿತ್ಯಗಳು. ಅವುಗಳ ಸಮೂಹವಾದ ಪುರಾಣವು ಅನಿತ್ಯ. ಹೀಗೆ ಭೇದವನ್ನು ಪರಿಗಣಿಸಿ ಒಂದಂಶವನ್ನು ನಿತ್ಯದಲ್ಲೂ, ಇನ್ನೊಂದಂಶವನ್ನು ಅನಿತ್ಯದಲ್ಲೂ ಸೇರಿಸಲಾಗಿದೆ. ಹೀಗೆ, ನಿತ್ಯಾನಿತ್ಯವೆಂಬ ಬೇರೆ ವಿಭಾಗವನ್ನು ತತ್ತ್ವವಿವೇಕದಲ್ಲಿ ಮಾಡಲಾಗಿಲ್ಲ. ಆದ್ದರಿಂದ ಎರಡೂ ಗ್ರಂಥಗಳಲ್ಲಿ ಪರಸ್ಪರ ವಿರೋಧವಿಲ್ಲ.

ಇದರಂತೆ ತತ್ತ್ವಸಂಖ್ಯಾನದಲ್ಲಿ ಅನಿತ್ಯವಸ್ತುಗಳನ್ನು ಸಂಸೃಷ್ಟ, ಅಸಂಸೃಷ್ಟಗಳೆಂದು ಎರಡು ವಿಧವಾಗಿ ವಿಭಾಗಿಸಲಾಗಿದೆ. ಆದರೆ ತತ್ತ್ವವಿವೇಕದಲ್ಲಿ ಈ ವಿಭಾಗವಿಲ್ಲ. ಏಕೆಂದರೆ ತತ್ತ್ವಸಂಖ್ಯಾನದಲ್ಲಿ ಮಹತ್ತತ್ತ್ವ ಅಹಂಕಾರತತ್ತ್ವ ಮೊದಲಾದ ವಸ್ತುಗಳನ್ನು ಅಸಂಸೃಷ್ಟಗಳೆಂದೂ, ಬ್ರಹ್ಮಾಂಡ ಮತ್ತು ಅದರೊಳಗಿನ ವಸ್ತುಗಳನ್ನು ಸಂಸೃಷ್ಟಗಳೆಂದೂ ಪರಿಗಣಿಸಲಾಗಿದೆ. ಪ್ರಕೃತಿಯಿಂದ ಉಪಚಯ ಹೊಂದಿದ ತತ್ತ್ವವೇ ಮಹತ್ತತ್ತ್ವ. ಪ್ರಕೃತಿ ಅದಕ್ಕೆ ಉಪಾದಾನ. ಮಹತ್ತತ್ತ್ವ ಉಪಾದೇಯ. ಉಪಾದಾನ-ಉಪಾದೇಯಗಳಿಗೆ ಅಭೇದವೂ ಇದೆ. ಆದ್ದರಿಂದ ಪ್ರಕೃತಿ-ಮಹತ್ತತ್ತ್ವಗಳನ್ನು ಒಂದಾಗಿ ಪರಿಗಣಿಸಿದರೆ ಮಹತ್ತತ್ತ್ವವು ಅಸಂಸೃಷ್ಟ ತತ್ತ್ವವಾಗುತ್ತದೆ. ಬ್ರಹ್ಮಾಂಡದ ಒಳಗಿರುವ ವಸ್ತುಗಳ ಉಪಾದಾನವೂ ಅನಿತ್ಯವಾದುದರಿಂದ ಅವು ಸಂಸೃಷ್ಟಗಳಾಗುತ್ತವೆ. ಹೀಗೆ ಉಪಾದಾನ ಮತ್ತು ಉಪಾದೇಯಗಳಿಗೆ ಅಭೇದ ವಿವಕ್ಷೆಯಿಂದ ತತ್ತ್ವಸಂಖ್ಯಾನ ಹೊರಟಿದೆ. ಅವೆರಡಕ್ಕೂ ಭೇದವಿವಕ್ಷೆಯಿಂದ ತತ್ತ್ವವಿವೇಕ ಹೊರಟಿದೆ. ಮಹತ್ತತ್ತ್ವದ ಉಪಾದಾನ ವಾದ ಪ್ರಕೃತಿಯನ್ನು ನಿತ್ಯವೆಂದೂ, ಅದರಿಂದ ಹುಟ್ಟಿದ ಮಹತ್ತತ್ತ್ವವನ್ನು ಅನಿತ್ಯವೆಂದೂ ತತ್ತ್ವವಿವೇಕ ವಿಭಾಗಮಾಡಿದೆ. ಹೀಗೆ ಮಾಡಿದಾಗ ಸೂಕ್ಷ್ಮವಾದ ಮೂಲಭಾಗ, ಅದರಿಂದ ಉಪಚಿತವಾದ ಸ್ಥೂಲಭಾಗ ಇವೆರಡಕ್ಕಿಂತ ಬೇರೆಯಾಗಿ ಅಸಂಸೃಷ್ಟಾನಿತ್ಯವೆಂದು ಹೇಳಿಸಿಕೊಳ್ಳುವ ಇನ್ನೊಂದು ವಸ್ತು ಉಳಿಯುವುದಿಲ್ಲ. ಆದ್ದರಿಂದ ಅಸಂಸೃಷ್ಟ-ಸಂಸೃಷ್ಟಗಳೆಂಬ ಎರಡು ವಿಭಾಗವನ್ನು ಇಲ್ಲಿ ಮಾಡಿಲ್ಲ. ಹೀಗೆ ಅಭಿಪ್ರಾಯಭೇದದಿಂದ ಎರಡು ಗ್ರಂಥಗಳಿಗೆ ತೋರುವ ವ್ಯತ್ಯಾಸವನ್ನು ಪರಿಹಾರಮಾಡಬೇಕು.

**ಗುಣ ಕ್ರಿಯಾ ಜಾತಿಪೂರ್ವಾ ಧರ್ಮಾಃ ಸರ್ವೇಽಪಿ ವಸ್ತುನಃ ।**
**ರೂಪಮೇವ, ದ್ವಿಧಂ ತಚ್ಚ ಯಾವದ್ವಸ್ತು ಚ ಖಂಡಿತಮ್ ।**
**ಖಂಡಿತೇ ಭೇದ ಐಕ್ಯಂ ಚ, ಯಾವದ್ವಸ್ತು ನ ಭೇದವತ್ ।**



**ಖಂಡಿತಂ ರೂಪಮೇವಾತ್ರ ವಿಕಾರೋಽಪಿ ವಿಕಾರಿಣಃ ।**
**ಕಾರ್ಯಕಾರಣಯೋಶ್ಚೈವ ತಥೈವ ಗುಣತದ್ವತೋಃ ।**
**ಕ್ರಿಯಾಕ್ರಿಯಾವತೋಸ್ತದ್ವತ್ ತಥಾ ಜಾತಿವಿಶೇಷಯೋಃ ।**
**ವಿಶಿಷ್ಟಶುದ್ಧಯೋಶ್ಚೈವ ತಥೈವಾಂಶಾಂಶಿನೋರಪಿ ॥**

ರೂಪ ರಸ ಮುಂತಾದ ಗುಣಗಳು, ಕ್ರಿಯೆಗಳು, ದ್ರವ್ಯತ್ವ, ಪೃಥಿವೀತ್ವ ಮೊದಲಾದ ಜಾತಿಗಳು ಇವೇ ಮುಂತಾದ ಎಲ್ಲ ಧರ್ಮಗಳೂ ತಾವು ಆಶ್ರಯಿಸಿದ ದ್ರವ್ಯದ ಸ್ವರೂಪವೇ ಆಗಿವೆ ಹೊರತು ಅವು ಆಶ್ರಯದ್ರವ್ಯಕ್ಕಿಂತ ಬೇರೆಯಲ್ಲ.

ದ್ರವ್ಯವನ್ನು ಆಶ್ರಯಿಸಿರುವ ಈ ಧರ್ಮಗಳು ಎರಡು ವಿಧವಾಗಿವೆ- ಆಶ್ರಯ ವಸ್ತು ಇರುವವರೆಗೂ ಇರುವವುಗಳು, ಆಶ್ರಯವಸ್ತು ಇರುವಾಗಲೇ ನಾಶವಾಗುವವು. ಮೊದಲನೆಯ ವಿಧದ ಧರ್ಮಗಳು 'ಯಾವದ್ವಸ್ತು' ಎಂದು ಹೇಳಿಸಿಕೊಳ್ಳುತ್ತವೆ. ಎರಡನೆಯ ವಿಧದ ಧರ್ಮಗಳು 'ಖಂಡಿತ' ಎನಿಸುತ್ತವೆ. ಖಂಡಿತವಾದ ಧರ್ಮಗಳಿಗೆ ಆಶ್ರಯದೊಡನೆ ಭೇದಾಭೇದವನ್ನೂ ಯಾವದ್ವಸ್ತು ಧರ್ಮಗಳಿಗೆ ಆಶ್ರಯದೊಡನೆ ಅತ್ಯಂತಾಭೇದವನ್ನೂ ತಿಳಿಯಬೇಕು.

ಮಡಿಕೆ ಎಂಬ ವಸ್ತುವು ನಾಶವಾದರೂ ಅದಕ್ಕೆ ಉಪಾದಾನ ಕಾರಣವಾದ ಮಣ್ಣು ನಾಶಹೊಂದದಿರುವುದರಿಂದ ಘಟ ಮೊದಲಾದ ವಿಕಾರ ವಸ್ತುಗಳು ಮಣ್ಣು ಮೊದಲಾದ ವಿಕಾರಿವಸ್ತುಗಳಿಂದ ಭಿನ್ನಾಭಿನ್ನವೇ ಆಗಿವೆ. ಕಾರ್ಯ-ಕಾರಣಗಳು, ಗುಣ-ದ್ರವ್ಯಗಳು, ಕ್ರಿಯೆ-ದ್ರವ್ಯಗಳು, ಜಾತಿ-ವ್ಯಕ್ತಿಗಳು, ವಿಶಿಷ್ಟ-ಶುದ್ಧಗಳು, ಅಂಶ-ಅಂಶಿಗಳು ಇವುಗಳೆಲ್ಲವುಗಳಲ್ಲಿಯೂ ಯಾವದ್ವಸ್ತು ಭಾವಿಯಾದರೆ ಅತ್ಯಂತಾಭೇದವೂ, ಖಂಡಿತವಾದರೆ ಭೇದಾಭೇದವು ಇರುತ್ತದೆ.

**ವಿವರಣೆ:—**'ಈವರೆಗೆ ಅಭಾವ ಮತ್ತು ದ್ರವ್ಯಗಳನ್ನಷ್ಟೇ ವಿಭಾಗಮಾಡಲಾಯಿತು. ಅವುಗಳನ್ನು ಅವಲಂಬಿಸಿಕೊಂಡಿರುವ ಧರ್ಮಗಳನ್ನು ವಿಭಾಗಮಾಡಿಲ್ಲ. ಪ್ರಮೇಯ ವಸ್ತುಗಳೆಲ್ಲವನ್ನೂ ವಿಭಾಗ ಮಾಡಬೇಕಾಗಿರುವುದರಿಂದ ಆ ಧರ್ಮಗಳನ್ನು ವಿಂಗಡಿಸದೇ ಬಿಟ್ಟಿರುವುದು ಸರಿಯಲ್ಲ' ಎಂಬ ಆಕ್ಷೇಪಕ್ಕೆ ತತ್ತ್ವವಿವೇಕದ ಈ ಭಾಗ ಉತ್ತರಕೊಡುತ್ತದೆ.

ದ್ರವ್ಯವನ್ನು ಅವಲಂಬಿಸಿಕೊಂಡಿರುವ ಗುಣ, ಕ್ರಿಯೆ ಮೊದಲಾದ ಧರ್ಮಗಳು ಆ ದ್ರವ್ಯಕ್ಕಿಂತ ಬೇರೆಯಲ್ಲ. ಆದ್ದರಿಂದ ಅವುಗಳನ್ನು ಪ್ರತ್ಯೇಕವಾಗಿ ವಿಭಾಗ ಮಾಡಿಲ್ಲ.

ದ್ರವ್ಯವನ್ನು ಆಶ್ರಯಸಿದ ಧರ್ಮಗಳು ಎರಡು ವಿಧವಾಗಿವೆ. ಕೆಲವು ದ್ರವ್ಯ ಇರುವವರೆಗೆ ಇರುತ್ತವೆ. ಉದಾ-ಬಿಸಿ ಎಂಬ ಗುಣವು ಬೆಂಕಿಯನ್ನು ಬಿಟ್ಟು ಎಂದೂ

ಇರುವುದಿಲ್ಲ. ಮಾತ್ರವಲ್ಲ ಬೆಂಕಿ ಇದ್ದಷ್ಟೂ ಸಮಯದವರೆಗೆ ಬಿಸಿ ಇದ್ದೇ ಇರುತ್ತದೆ. ಇಂಥಹ ಧರ್ಮಗಳಿಗೆ ದ್ರವ್ಯದೊಂದಿಗೆ ಅಭೇದ. ಬೆಂಕಿಗಿಂತ ಬೇರೆಯಾಗಿ 'ಬಿಸಿ' ಎಂಬ ಗುಣವು ಕಾಣುವುದಿಲ್ಲವಾದುದರಿಂದ ಅದಕ್ಕೆ ಬೆಂಕಿಯೊಂದಿಗೆ ಅಭೇದವಿದೆ. ಆದರೆ 'ಬೆಂಕಿಯಲ್ಲಿ ಬಿಸಿ' ಎಂದು ಭೇದವ್ಯವಹಾರವಿರುವುದರಿಂದ ಅವೆರಡಕ್ಕೂ ವಿಶೇಷವೂ ಇದೆ. ಆದ್ದರಿಂದ ಬೆಂಕಿಗೂ ಬಿಸಿ ಎಂಬ ಗುಣಕ್ಕೂ ಸವಿಶೇಷಾಭೇದ.

ಮತ್ತೆ ಕೆಲವು ಧರ್ಮಗಳು ದ್ರವ್ಯವನ್ನು ಅವಲಂಬಿಸಿಕೊಂಡಿದ್ದರೂ ದ್ರವ್ಯ ಇದ್ದಂತೆಯೇ ಅವು ನಾಶವಾಗುತ್ತವೆ. ಉದಾ-ಮಾವಿನಹಣ್ಣು ಮೊದಲು ಹಸಿರಾಗಿತ್ತು. ಮಾಗಿದಾಗ ಹಳದಿಯಾಗುತ್ತದೆ. ಇಲ್ಲಿ ಹಣ್ಣು ಎಂಬ ದ್ರವ್ಯ ಇದ್ದಾಗಲೇ ಅದರ ಹಸಿರು ಎಂಬ ಗುಣ ನಾಶವಾಗಿದೆ. ಇಂತಹ ಗುಣ ಮತ್ತು ದ್ರವ್ಯಗಳಿಗೆ 'ಭೇದಾಭೇದ'. ಹಸಿರು ಬಣ್ಣ ಇಲ್ಲವಾದ ಮೇಲೂ ಮಾವಿನಹಣ್ಣು ಇರುವುದರಿಂದ ಆ ಬಣ್ಣಕ್ಕೂ ಹಣ್ಣಿಗೂ ಭೇದವಿದೆ. ಆದರೆ ಹಸಿರು ಬಣ್ಣವಿರುವಾಗ ಆ ಬಣ್ಣ ಹಣ್ಣಿಗಿಂತ ಬೇರೆಯಾಗಿ ಕಾಣುವುದಿಲ್ಲವಾದ್ದರಿಂದ ಅಭೇದವೂ ಇದೆ.

ಇದರಂತೆ ಮಣ್ಣಿಗೂ ಮಡಿಕೆಗೂ, ಬ್ರಾಹ್ಮಣತ್ವವೆಂಬ ಜಾತಿಗೂ ವ್ಯಕ್ತಿಗೂ, ವಿಶಿಷ್ಟಕ್ಕೂ ಶುದ್ಧಕ್ಕೂ ಭೇದಾಭೇದವಿದೆ. ಮಡಿಕೆಗಿಂತ ಮೊದಲು ಮಣ್ಣಿತ್ತು. ಮಡಿಕೆ ನಾಶವಾದ ಮೇಲೂ ಮಣ್ಣು ಇದೆ. ಆದ್ದರಿಂದ ಅವೆರಡಕ್ಕೆ ಭೇದವಿದೆ. ಮಡಿಕೆ ಇರುವಾಗ 'ಇದು ಮಣ್ಣಲ್ಲ' ಎಂದು ಹೇಳಲಾಗದಿರುವುದರಿಂದ ಅದಕ್ಕೂ ಮಣ್ಣಿಗೂ ಅಭೇದವೂ ಇದೆ. ಅದರಂತೆ ವ್ಯಕ್ತಿಯಿದ್ದರೂ ಅವನು ಮಹಾಪಾಪಮಾಡಿದರೆ ಅವನ ಬ್ರಾಹ್ಮಣತ್ವ ಜಾತಿ ನಾಶವಾಗುತ್ತದೆ. ಆದ್ದರಿಂದ ಅವೆರಡಕ್ಕೆ ಭೇದವಿದೆ. ಬ್ರಾಹ್ಮಣನಾಗಿರುವಾಗ ಅವನಿಗೂ ಆ ಜಾತಿಗೂ ಭೇದವು ತೋರದಿರುವುದರಿಂದ ಅಭೇದವೂ ಇದೆ. ಹೀಗೆಯೇ ಹಣ ಎಂಬ ದ್ರವ್ಯ ಬಂದಾಗ ಮನುಷ್ಯ ಧನಿಕ-ಧನವಿಶಿಷ್ಟನಾಗುತ್ತಾನೆ. ಧನವಿಶಿಷ್ಟನಾದ ವ್ಯಕ್ತಿಯೂ ಮೊದಲು ಬಡತನದಲ್ಲಿದ್ದ ವ್ಯಕ್ತಿಯೂ ಬೇರೆ ಬೇರೆ ಅಲ್ಲ. ಆದ್ದರಿಂದ ಧನವಿಶಿಷ್ಟ ವ್ಯಕ್ತಿ ಮತ್ತು ವಿಶೇಷ್ಯನಾದ ವ್ಯಕ್ತಿ ಇವರಿಬ್ಬರಿಗೆ ಅಭೇದವಿದೆ. ಆದರೆ ಧನವಿಲ್ಲದೆಯೂ ವ್ಯಕ್ತಿ ಇದ್ದ. ಆದ್ದರಿಂದ ಅವೆರಡಕ್ಕೆ ಭೇದವೂ ಇದೆ. ಹೀಗೆ ಇವೆಲ್ಲವುಗಳಿಗೂ ಭೇದಾಭೇದ.

**ಯ ಏತತ್ ಪರತಂತ್ರಂ ತು ಸರ್ವಮೇವ ಹರೇಃ ಸದಾ ।**
**ವಶಮಿತ್ಯೇವ ಜಾನಾತಿ ಸಂಸಾರಾನ್ಮುಚ್ಯತೇ ಹಿ ಸಃ ॥**

**॥ ಇತಿ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯವಿರಚಿತಂ**
**ತತ್ವವಿವೇಕ ಪ್ರಕರಣಂ ಸಂಪೂರ್ಣಮ್ ॥**



ಇದುವರೆಗೆ ವಿಭಾಗ ಮಾಡಿದ ಭಾವಾಭಾವ ಪ್ರಮೇಯಗಳೆಲ್ಲವೂ ಶ್ರೀಹರಿಯ ಅಧೀನವೆಂದು ಯಾರು ತಿಳಿಯುವನೋ ಅವನು ನಿಶ್ಚಯವಾಗಿಯೂ ಈ ಸಂಸಾರದಿಂದ ಬಿಡುಗಡೆ ಹೊಂದುತ್ತಾನೆ.

**ವಿವರಣೆ:—**ಭಾವಾಭಾವಾದಿ ತತ್ತ್ವಗಳ ಜ್ಞಾನಮಾತ್ರದಿಂದ ಯಾವ ಪ್ರಯೋಜನವೂ ಇಲ್ಲದಿದ್ದರೂ ಅವುಗಳು ವಿಷ್ಣುವಿನ ಅಧೀನಗಳೆಂದು ತಿಳಿದುಕೊಂಡರೆ ಆ ಜ್ಞಾನವು ಮೋಕ್ಷಸಾಧನವಾಗುತ್ತದೆ.

ಇಲ್ಲಿಗೆ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯರಿಂದ ರಚಿತವಾದ
ತತ್ವವಿವೇಕ ಪ್ರಕರಣ ಮುಗಿಯಿತು.